ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಆಗಸ್ಟ್ 2021
ಸಂಪುಟ 17, ಸಂಚಿಕೆ 04
ಸಂಚಿಕೆ ಬೆಲೆ ರೂ. 1/-


324, Chord Road
Vijayanagara
Bengaluru - 560 040.
Ph: 080 2339 9323, 2339 9635
E: info@buntsanghablr.com




ಸಂಘದ ವತಿಯಿಂದ ಆಕ್ಸಿಜನ್ ಅಭಿಯಾನ




ಸಂಘದ ಸಮಾಜ ಸೇವಾ ಮತ್ತು ಸೇವಾದಳದ
ವತಿಯಿಂದ ಉಚಿತ ಕೋವಿಡ್-19 ಲಸಿಕಾ ಅಭಿಯಾನ







ಬಹುತೇಕ ಮುಕ್ತಾಯಗೊಂಡ ಬಂಟರ ಸಂಘ
ಆರ್.ಎನ್.ಎಸ್ ವಿದ್ಯಾನಿಕೇತನ-II ಯೋಜನೆ

# BUNTS' SANGHA RNS EVENING COLLEGE

**(AFFILIATED TO BANGALORE UNIVERSITY)**

**# 324, BUNTS COMPLEX CHORD ROAD, VIJAYANAGAR, BANGALORE - 560 040**

**Ph No. : 8217365948, 9742228630, 9008573766 Website: www.bsrnsv.com**


## COURSES OFFERED

- B.COM
- B.COM INTEGRATED [CA / CS / CMA]







## Admissions Open for Academic Year 2021-2022





## WHY R N S ?

- Pioneers in Educational field.
- Limited seats - Individual attention
- Value added soft skill training and job oriented courses.
- Placement Cell
- Qualified, dedicated and inspiring faculties.
- Best suited for CA, CS and CMA aspirants.
- CCTV Camera Surveillance.
- Voluminous Library.
- Spacious Auditorium.
- Hostel facilities available for boys and girls.

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 17** **AUGUST 2021** **ISSUE 04**

**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ|| ಸಂಪಾದಕರು :
**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಕುಮಾರಿ ಶಾಲ್ಮಲೀ ಸುರೇಶ್**
**ಶ್ರೀಮತಿ ಶ್ಯಾಮಲಾ ಶೆಟ್ಟಿ**
**ಶ್ರೀಮತಿ ಅನುಷಾ ಶೆಟ್ಟಿ**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**– ಸಂಪಾದಕ ಮಂಡಳಿ**

## ಒಳ ಪುಟಗಳಲ್ಲಿ...

| | | **ಪುಟ** |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ಜಾಗತಿಕ ಬಂಟರ ಸಂಘಗಳ ಒಕ್ಕೂಟದ ವತಿಯಿಂದ ಸಮಾಜಕಲ್ಯಾಣ ಕಾರ್ಯಕ್ರಮ ಯೋಜನೆಯಡಿ ಫಲಾನುಭವಿಗಳಿಗೆ ಚೆಕ್ ವಿತರಣೆ | 5 |
| 5. | ಕುಂದಗನ್ನಡ | 6 |
| 6. | ವಿವಾಹ ಯುವಜನರ ಕರ್ತವ್ಯ ಪರಿಪಾಲನೆ | 8 |
| 7. | Family bonding | 10 |
| 8. | ಸುದ್ದಿವಾಹಿನಿಗಳು ಮತ್ತು ಸಾಮಾಜಿಕ ಕಳಕಳಿ | 11 |
| 9. | Unsung Heroes of Indian Revolt 1857 | 13 |
| 10. | ಬಂಟರ ಸಂಘ ಬೆಂಗಳೂರು – ಸಮಾಜ ಸೇವಾ ವಿಭಾಗ ಮತ್ತು ಸೇವಾದಳ | 17 |
| 11. | "ಉತ್ತುಂಗ ಶಿಖರದ ಹಾದಿಯಲ್ಲಿ ನಮ್ಮ ಬಂಟರ ಸಂಘ" | 20 |
| 12. | ಸಮಾಜ ಸೇವಾ ಸಮಿತಿ/ಸೇವಾದಳ – ಸಹಾಯ ಹಸ್ತ | 22 |

### ಮುಖಪುಟ

**ಸಂಘದ ವತಿಯಿಂದ ಆಕ್ಸಿಜನ್ ಅಭಿಯಾನ**

**ಸಮಾಜ ಸೇವಾ ಸಮಿತಿ ವತಿಯಿಂದ**
**ಉಚಿತ ಕೋವಿಡ್ ಲಸಿಕಾ ಅಭಿಯಾನ**

**BSRNSV II ಯೋಜನೆ ಅಂತಿಮ ಹಂತದಲ್ಲಿ**

# ಸಂಪಾದಕೀಯ



ಕೆಲವು ತಿಂಗಳುಗಳ ನಂತರ ಈಗ ಮತ್ತೊಮ್ಮೆ ನಿಮ್ಮ ಮುಂದೆ ಬರುತ್ತಿದ್ದೇವೆ–ಸ್ನೇಹ ಚಿಂತನೆಯ ಮುಖಾಂತರ. "ನೆನೆದವರ ಮನದಲ್ಲಿ" ಎಂಬ ಮಾತಿನಂತೆ ನಮ್ಮ ಸಮಾಜ ಬಾಂಧವರಲ್ಲಿ ಯಾರೇ ತೊಂದರೆಯಲ್ಲಿದ್ದರೂ ನಮ್ಮ ಸಂಘವು ಅಲ್ಲಿಗೆ ಧಾವಿಸಿ ನೆರವಿನ ಹಸ್ತ ನೀಡುತ್ತಾ ಬಂದಿದೆ. ಇತ್ತೀಚೆಗೆ ಕೋವಿಡ್‌ನಿಂದಾಗಿ ಸಮಾಜದ ಅನೇಕರಿಗೆ ಹಲವಾರು ರೀತಿಗಳಲ್ಲಿ ತೊಂದರೆಯಾಗಿದೆ, ಹಾಗೆಯೇ ನಮ್ಮ ಸಂಘವೂ ಇದಕ್ಕೆ ಹೊರತಾಗಿಲ್ಲ. ಸಂಘದ ಕೆಲಸ ಕಾರ್ಯಗಳಿಗೂ, ಆದಾಯಕ್ಕೂ ಸಾಕಷ್ಟು ತೊಂದರೆಯಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇಂತಹ ಕಠಿಣ ಪರೀಕ್ಷೆಯ ಸಮಯದಲ್ಲಿ ನಮ್ಮ ಸಂಘ ಅನೇಕರ ನೆರವಿಗೆ ಧಾವಿಸಿರುವುದು ನಮ್ಮ ಜೀವನದ ಮೌಲ್ಯಗಳಿಗೆ ಸಾಕ್ಷಿಯಾದಂತಿದೆ. ಇದನ್ನೆಲ್ಲಾ ಗಮನಿಸುವಾಗ ಮಹಾ ಉಪನಿಷತ್ ಹಾಗೂ ಋಗ್ವೇದದಲ್ಲಿ ಉಲ್ಲೇಖವಾಗಿರುವ ಎರಡು ಸಾಲುಗಳು ನೆನಪಾಗುತ್ತವೆ.

**ಆಯಂ ನಿಜಃ ಪರೋವೇತಿ ಗಣನಾ ಲಘು ಚೇತಸಾಮ್।**
**ಉದಾರ ಚರಿತಾನಾಮ್ ತು ವಸುದೈವ ಕುಟುಂಬಕಮ್॥**

ಈ ಶ್ಲೋಕ ನಮ್ಮ ಭಾರತೀಯ ಸಮಾಜದ ಪ್ರಮುಖ ನೈತಿಕ ಮೌಲ್ಯವೆಂದು ಪರಿಗಣಿಸಲ್ಪಟ್ಟಿದೆ. ಇವರು ನಮ್ಮವರು, ಇವರು ಬೇರೆಯವರು ಎಂಬ ಚಿಂತನೆವುಳ್ಳವರು ಸಣ್ಣ ಮನಸ್ಸಿನವರು ಎಂದರ್ಥ. ಇಂದಿನ ವ್ಯಾವಹಾರಿಕ ಪ್ರಪಂಚದಲ್ಲಿ ಇಂತಹ ಯೋಚನೆಗಳು ತನ್ನದೇ ಆದ ಮಿತಿಯಲ್ಲಿದ್ದು, ಎಲ್ಲರೂ ನಮ್ಮವರೇ ಎಂಬ ಭಾವನೆ ಹೊಂದುವುದು ಬಹಳ ಮುಖ್ಯವಾಗಿರುತ್ತದೆ. ಎಷ್ಟೇ ಹೇಳಿದರೂ ಅನೇಕರಲ್ಲಿ ಇಂದಿಗೂ ದೊಡ್ಡವರು–ಬಡವರೆಂಬ ಭೇದಭಾವ ಇದ್ದೇ ಇರುತ್ತದೆ. ಐಶ್ವರ್ಯ ಬಂದಾಗ ಬದಲಾಗುವ ಜನರನ್ನು ನಾವೆಷ್ಟೋ ನೋಡಿದ್ದೇವೆ. ಫ್ಯಾಶನ್ ಎಂಬ ಪಿಡುಗು ಕೂಡಾ ಅಂತಹವರನ್ನು ಹಿಂಬಾಲಿಸುತ್ತದೆ. ಅಂತಹವರು ಸಾಮಾನ್ಯರೊಂದಿಗೆ ಬೆರೆಯುವಲ್ಲಿ ಸ್ವಲ್ಪವಾದರೂ ಹಿಂದೆ ಮುಂದೆ ನೋಡುತ್ತಾರೆ. ಹಾಗೆಯೇ ಸಾಮಾನ್ಯರಲ್ಲಿ ಸಾಮಾನ್ಯರು ಅಂತಹ ಜನರೊಂದಿಗೆ ಬೆರೆಯುವುದಕ್ಕೂ ಇಷ್ಟಪಡುವುದಿಲ್ಲ.

ನಮ್ಮ ಜೊತೆಗಿರುವವರು, ಸಮಾಜದ ಒಳಿತನ್ನೇ ಬಯಸುವವರು ಇಡೀ ದೇಶದ ಬಗ್ಗೆ ಚಿಂತಿಸುತ್ತಾರೆ. ಅಂತಹವರ ಪ್ರತೀ ದಿನದ ಪ್ರಾರ್ಥನೆಯ ಮೊದಲ ಸಾಲುಗಳೇ "ನಮಸ್ತೇ ಸದಾ ವತ್ಸಲೇ ಮಾತೃಭೂಮೇ" ಎಂದು ಪ್ರಾರಂಭವಾಗುತ್ತದೆ. ಅಂದರೆ ನಮ್ಮ ಧರ್ಮದ ಕಲ್ಪನೆಯಲ್ಲಿ ಆರ್ಥಿಕ ವಿಕಾಸವೂ ಇದೆ ಎನ್ನುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ಭಗವಂತನ ಸೇವೆ ಎಂದರೆ ಮನುಷ್ಯನ ಸೇವೆ ಎಂಬ ಅರ್ಥವಿದೆ. ಶ್ರೀ ರಾಮಕೃಷ್ಣ ಪರಮಹಂಸರು ಇದನ್ನೇ ಪ್ರತಿಪಾದಿಸಿದ್ದಾರೆ. ಬಡತನ ಮತ್ತು ಹಸಿವಿನ ನಿರ್ಮೂಲನೆಯೇ ಧರ್ಮನಿಷ್ಠೆ ಎಂಬುವುದು ಸ್ವಾಮಿ ವಿವೇಕಾನಂದರ ಮಾತುಗಳು. ಅತ್ಯಂತ ಮೌಲ್ಯಾಧಾರಿತ ಸಂಸ್ಕೃತಿಯಿಂದ ಬಂದವರು ನಾವು ಭಾರತೀಯರು, ಅದರಲ್ಲಿಯೂ ಬಂಟರು.

ಇತ್ತೀಚೆಗೆ ನಮ್ಮ ಸಂಘದಲ್ಲಿ ನಡೆದ ಅನೇಕ ಸೇವಾ ಕಾರ್ಯಗಳು ಈ ನಿಟ್ಟಿನಲ್ಲಿ ಆಗಿವೆ. ಎಲ್ಲರೂ ಒಂದೇ, ಎಲ್ಲರೂ ಸುಖವಾಗಿರಬೇಕು, ಕಷ್ಟದಲ್ಲಿರುವವರಿಗೆ ನೆರವಾಗುವುದೇ ನಮ್ಮ ಕರ್ತವ್ಯವಾಗಿರಬೇಕು ಎಂಬ ಭಾವನೆಯಿಂದ ನಮ್ಮ ಸಂಘ ಕೆಲಸ ಮಾಡುತ್ತಿದೆ. ಇದು ರಕ್ತದಾನ ಶಿಬಿರವಾಗಲಿ, ಕೋವಿಡ್ ವ್ಯಾಕ್ಸಿನೇಷನ್ ಆಗಿರಲಿ, ದಿನಸಿ ಕಿಟ್‌ನ ವಿತರಣೆ ಆಗಿರಲಿ, ಶಾಲಾ ಪುಸ್ತಕಗಳ ವಿತರಣೆ, ಅನೇಕರಿಗೆ ರಿಯಾಯಿತಿ ದರದಲ್ಲಿ ವಿದ್ಯಾಭ್ಯಾಸಕ್ಕೆ ಸಹಾಯ, ಸಂಘದ ವಸತಿ ಗೃಹಗಳಲ್ಲಿ ರಿಯಾಯಿತಿ ದರದಲ್ಲಿ ಆಶ್ರಯ, ವಿದ್ಯಾರ್ಥಿವೇತನ, ಮದುವೆಗೆ ಕರಿಮಣಿ ದೇಣಿಗೆ, ಆಕ್ಸಿಜನ್ ಅಭಿಯಾನ, ನುರಿತ ವೈದ್ಯರೊಂದಿಗೆ ಕೋವಿಡ್ ಸಮಸ್ಯೆಗೆ ಉಚಿತ ಸಲಹೆ – ಹೀಗೆ ಹತ್ತು ಹಲವಾರು ಸೇವಾ ಕಾರ್ಯಗಳು ನಮ್ಮ ಸಂಘದಿಂದ ನಡೆಯುವಾಗ ನಮ್ಮ ಜೀವನದ ಸಾರ್ಥಕತೆ ಮೆರೆಯಲು ದೊರೆತ ಬಹುದೊಡ್ಡ ಅವಕಾಶ ಎಂಬುದು ಅರಿವಾಗುತ್ತದೆ.

ಅತೀ ವೇಗದಲ್ಲಿ ಓಡುತ್ತಿರುವ ಜಗತ್ತಿನ ಬೆಳವಣಿಗೆ, ಬದಲಾದ ಜೀವನ ಶೈಲಿಗಳಿಂದಾಗಿ, ಯಾರಾದರೂ ತಿಳಿದೋ, ತಿಳಿಯದೆಯೋ ಜೀವನ ಮೌಲ್ಯಗಳನ್ನು ಹಾಗೂ ಸಮಾಜದ ಇತರರ ಒಳಿತಿನ ಬಗ್ಗೆ ಯೋಚಿಸುತ್ತಿರುವುದನ್ನು ಮರೆತ್ತಿದ್ದೇ ಆದರೆ, ಅದನ್ನು ಸರಿಪಡಿಸಿಕೊಳ್ಳಲು ಇದೊಂದು ಸದಾವಕಾಶ ಇದ್ದಂತೆ. ಎಲ್ಲಿಯೂ ಬೇಧವಿಲ್ಲದೇ, ಇತರರ ಕಷ್ಟ ಸುಖದಲ್ಲಿ ಭಾಗಿಯಾಗಿ ಒಂದಾಗಿ ಬಾಳುವುದೇ ನಮ್ಮೆಲ್ಲರ ಉದ್ದೇಶವಾಗಿರಲಿ.

**ಎಂ. ಮುರಲೀಧರ ಹೆಗ್ಡೆ**
hegdemm@gmail.com

# ಅಧ್ಯಕ್ಷರ ಮಾತು



ಸದಸ್ಯ ಬಾಂಧವರೆಲ್ಲರಿಗೂ 75 ನೇ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು,

ತಮಗೆಲ್ಲರಿಗೂ ತಿಳಿದಿರುವಂತೆ ಕೋವಿಡ್ ಮೊದಲನೇ ಅಲೆಗಿಂತಲೂ ಎರಡನೇ ಅಲೆಯ ಪರಿಣಾಮ ತೀವ್ರವಾಗಿದ್ದು, ಹಲವಾರು ಸಾವು-ನೋವುಗಳು ಸಂಭವಿಸಿದೆ. ಕೋವಿಡ್‌ನ ಎರಡನೇ ಅಲೆಯ ಪ್ರಭಾವ ಕೊಂಚ ಕಡಿಮೆಯಾಗುತ್ತಿರುವ ಈ ಹಂತದಲ್ಲಿ ಮೂರನೇ ಅಲೆ ಕಾಡುವ ಆತಂಕದ ವಾತಾವರಣ ಮತ್ತೊಮ್ಮೆ ಸೃಷ್ಠಿಯಾಗಿದೆ. ಬೆಂಗಳೂರು ಬಂಟರ ಸಂಘ ಸಮಾಜಮುಖಿ ಕಾರ್ಯಕ್ರಮಗಳಿಗೆ ಸದಾ ಮುಂಚೂಣಿಯಲ್ಲಿದ್ದು, ಕೊರೋನಾ ಸಂದರ್ಭದಲ್ಲಿಯೂ ನಮ್ಮ ಸಂಘದ ವತಿಯಿಂದ ಸಾಧ್ಯವಾದಷ್ಟು ಮಟ್ಟಿಗೆ ಸದಸ್ಯರ ಸಂಕಷ್ಟಕ್ಕೆ ನೆರವಾಗುವ ಪ್ರಯತ್ನವನ್ನು ಮಾಡಲಾಗಿದೆ. ಅಗತ್ಯವಿರುವ ಕೋವಿಡ್ ಸೋಂಕಿತ ಸದಸ್ಯರಿಗೆ ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಒದಗಿಸಲು ಸಂಘವು ಸನ್ನದ್ಧವಾಗಿದೆ.

ಕೋವಿಡ್ ಸೋಂಕಿತರಿಗೆ ಆಕ್ಸಿಜನ್ ಕೊರತೆ ಕಾಡುತ್ತಿದ್ದ ಸಂದರ್ಭದಲ್ಲಿ, 'ಆಕ್ಸಿಜನ್ ಅಭಿಯಾನ' ಎನ್ನುವ ವಿನೂತನ ಕಾರ್ಯಕ್ರಮವನ್ನು ರಾಜ್ಯದ ಉಪಮುಖ್ಯಮಂತ್ರಿಗಳಾದ ಶ್ರೀ ಅಶ್ವಥ್ ನಾರಾಯಣ್‌ರವರಿಂದ ಉಧ್ಘಾಟಿಸಿ, ಅಭಿಯಾನದ ಮೂಲಕ ವೈದ್ಯರ ಸಲಹೆಯ ಮೇರೆಗೆ ಅಗತ್ಯವಿರುವ ಕೋವಿಡ್ ಸೋಂಕಿತರಿಗೆ ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ನೀಡಲಾಗಿತ್ತು. ಆಕ್ಸಿಜನ್ ಕಾನ್ಸಂಟ್ರೇಟರ್ ನೀಡುವ ಅಭಿಯಾನಕ್ಕೆ ಚಾಲನೆ ನೀಡಿದ ಪ್ರಪ್ರಥಮ ಸಂಸ್ಥೆ ನಮ್ಮ ಬಂಟರ ಸಂಘ ಬೆಂಗಳೂರು ಎನ್ನುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಅಭಿಯಾನಕ್ಕೆ ನಮ್ಮ ಸಂಘದ ಆಡಳಿತ ಮಂಡಳಿಯ ಸದಸ್ಯರು, ಬಂಟರ ಸಂಘ ಆರ್.ಎನ್.ಎಸ್.ವಿದ್ಯಾನಿಕೇತನದ ಪೋಷಕರು, ಸದಸ್ಯ ಬಾಂಧವರು, ಸಂಘ ಹಾಗೂ ಶಾಲೆಯ ಸಿಬ್ಬಂದಿಗಳು ತಮ್ಮ ಕೈಲಾದಷ್ಟು ಮೊತ್ತವನ್ನು ಹಾಗೂ ಆಕ್ಸಿಜನ್ ಕಾನ್ಸಂಟ್ರೇಟರ್‌ಗನ್ನು ದೇಣಿಗೆಯಾಗಿ ನೀಡಿರುತ್ತಾರೆ. ದಾನಿಗಳಿಗೆಲ್ಲರಿಗೂ ಹಾಗೂ ಸಮಾಜಮುಖಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸಹಕರಿಸಿದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರಿಗೆ ಅನಂತಾನಂತ ವಂದನೆಗಳು.

ವೈದ್ಯಕೀಯ ವಿಭಾಗದ ಚೇರ್‌ಪರ್ಸನ್ ಡಾ. ನಿಶಾಕಾಂತ್ ಶೆಟ್ಟಿಯವರ ನೇತೃತ್ವದಲ್ಲಿ ಹಮ್ಮಿಕೊಂಡ 'ಆಪ್ತ ಸಮಾಲೋಚನಾ' ಕಾರ್ಯಕ್ರಮದ ಮೂಲಕ ಸುಮಾರು 85 ಕ್ಕೂ ಹೆಚ್ಚು ನುರಿತ ವೈದ್ಯರು ಸಂಘದ ಸದಸ್ಯರು, ಶಾಲೆಯ ಪೋಷಕರು ಹಾಗೂ ಇತರ ಸಾರ್ವಜನಿಕ ಬಂಧುಗಳಿಗೆ ಮಾನಸಿಕ ಸ್ಥೈರ್ಯ ಹಾಗೂ ಔಷಧೋಪಚಾರದ ಬಗ್ಗೆ ಮಾಹಿತಿ ನೀಡಿರುವುದು ಶ್ಲಾಘನೀಯ. ವೆಬಿನಾರ್‌ಗಳ ಮೂಲಕ ವಿಶೇಷ ಸಲಹೆ-ಸೂಚನೆ ನೀಡಿದ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಶನ್‌ನ ಉಪಕುಲಪತಿಗಳಾದ ಡಾ. ಪಿ. ಬಾಲಕೃಷ್ಣ ಶೆಟ್ಟಿ, ರಾಮಯ್ಯ ಮೆಡಿಕಲ್ ಕಾಲೇಜಿನ ಪೆಥಾಲಜಿ ವಿಭಾಗದ ಮುಖ್ಯಸ್ಥರಾದ ಡಾ.ನಂದಕಿಶೋರ್ ಆಳ್ವ, ಲಂಡನ್‌ನಲ್ಲಿ ವೈದ್ಯರಾಗಿರುವ ಡಾ. ಸುರೇಶ್ ಶೆಟ್ಟಿ ಹಾಗೂ ಆಪ್ತಸಮಾಲೋಚನಾ ಬಳಗದ ಎಲ್ಲಾ ವೈದ್ಯರುಗಳಿಗೆ ಅಭಿನಂದನೆಗಳು. ಸಮಾಜ ಸೇವಾ ಸಮಿತಿ ಹಾಗೂ ಸೇವಾದಳದ ಚೇರ್‌ಮೆನ್ ಶ್ರೀ ಎಂ.ಬಿ. ಉಮೇಶ್ ಶೆಟ್ಟಿಯವರ ನೇತೃತ್ವಲ್ಲಿ ಹಮ್ಮಿಕೊಂಡ ಲಸಿಕಾ ಅಭಿಯಾನದಲ್ಲಿ ಸುಮಾರು ಸಾವಿರಕ್ಕೂ ಮಿಕ್ಕಿ ಸದಸ್ಯರು, ಶಾಲಾ ಪೋಷಕರು, ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಕೋವಿಡ್ ಲಸಿಕೆಗಳನ್ನು ಪಡೆದರು. ಸಂಘದ ಆವರಣದಲ್ಲಿ ಬಿಬಿಎಂಪಿ ಸಹಯೋಗದಿಂದ ಆರಂಭಿಸಿದ್ದ ಕೋವಿಡ್ ಕೇರ್ ಸೆಂಟರ್‌ನಿಂದಲೂ ನೂರಾರು ಕೋವಿಡ್ ಸೋಂಕಿತರು ವೈದ್ಯರಿಂದ ಪ್ರಾಥಮಿಕ ಚಿಕಿತ್ಸೆ ಹಾಗೂ ಔಷಧೋಪಚಾರದ ಸೌಲಭ್ಯಗಳನ್ನು ಪಡೆದಿರುತ್ತಾರೆ.

ಕೋವಿಡ್‌ನಿಂದ ತಂದೆ ಅಥವಾ ತಾಯಿಯನ್ನು ಕಳೆದುಕೊಂಡ ಸಮುದಾಯದ ಮಕ್ಕಳಿಗೆ ನಮ್ಮ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ ಉಚಿತ ಶಿಕ್ಷಣ ನೀಡುವ ಹಾಗೂ ಕೋವಿಡ್‌ನಿಂದ ಪತಿಯನ್ನು ಕಳೆದುಕೊಂಡು ಆರ್ಥಿಕ ಸಂಕಷ್ಟದಲ್ಲಿರುವ ಸಮುದಾಯದ ಸಹೋದರಿಯರಿಗೆ ನಮ್ಮ ಸಂಸ್ಥೆಯಲ್ಲಿ ಅಥವಾ ಇನ್ಯಾವುದೇ ಬಂಟೇತರ ಸಂಸ್ಥೆಯಗಳಲ್ಲಿ ಸೂಕ್ತ ಉದ್ಯೋಗ ನೀಡಲು ನಮ್ಮ ಸಮಿತಿಯು ನಿಶ್ಚಯಿಸಿದ್ದು, ಆಸಕ್ತರು ಹೆಚ್ಚಿನ ವಿವರಗಳಿಗೆ ಸಂಘದ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಕೋವಿಡ್‌ನಿಂದಾಗಿ 2021ನೇ ಸಾಲಿನಲ್ಲಿ ಸಿಇಟಿ ಪರೀಕ್ಷೆ ಹಾಜರಾಗಲಿರುವ ವಿದ್ಯಾರ್ಥಿಗಳಿಗೆ ತರಬೇತಿಗೆ ತೊಂದರೆಯಾಗಿರುವ ನಿಟ್ಟಿನಲ್ಲಿ ಬಂಟರ ಸಂಘ ಆರ್.ಎನ್.ಎಸ್. ಕಾಂಪೋಸಿಟ್ ಪದವಿ ಪೂರ್ವ ಕಾಲೇಜಿನ ವತಿಯಿಂದ ನುರಿತ ಬೋಧಕರಿಂದ ಆನ್‌ಲೈನ್ ಮೂಲಕ ಸಿಇಟಿ (CET) ಪರೀಕ್ಷಾ ಸಿದ್ಧತೆಗೆ ಉಚಿತ ತರಬೇತಿ ಆಯೋಜಿಸಲಾಗಿತ್ತು ಎಂದು ತಿಳಿಸಲು ಹರ್ಷಿಸುತ್ತಿದ್ದೇವೆ.

ತಮಗೆ ತಿಳಿದಿರುವಂತೆ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-II ಯೋಜನೆಯ ಕಾಮಗಾರಿಯು ಪೂರ್ಣಗೊಂಡಿದ್ದು, ಈ ತಿಂಗಳಿನಲ್ಲಿ ನಿರ್ಮಾಣ ಗುತ್ತಿಗೆದಾರರಿಂದ ಸಂಕೀರ್ಣದ ಉಸ್ತುವಾರಿಯನ್ನು ಸುಪರ್ದಿಗೆ ಪಡೆಯಲಿದ್ದೇವೆ. 2021-22 ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಲಾಗುತ್ತಿದ್ದು, ಇನ್ನೂ ಹೆಚ್ಚಿನ ವಿದ್ಯಾರ್ಥಿಗಳನ್ನು ಶಾಲೆಗೆ ದಾಖಲಿಸುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುತ್ತಿದೆ. ಈ ಬಾರಿ ಆಗಸ್ಟ್ 15ರಂದು ಸ್ವಾತಂತ್ರ್ಯೋತ್ಸವದ ಧ್ವಜಾರೋಹಣವನ್ನು ಹೊಸ ಸಂಕೀರ್ಣದಲ್ಲಿ ನೆರವೇರಿಸುವ ಆಶಯವನ್ನು ನಮ್ಮ ಸಮಿತಿಯು ಹೊಂದಿದೆ.

ಸಂಘವು ನಡೆಸಬೇಕಿದ್ದ ವಿಶೇಷ ಮಹಾಸಭೆ ಹಾಗೂ ವಾರ್ಷಿಕ ಮಹಾಸಭೆಯನ್ನು ಸರಕಾರದ ಕೋವಿಡ್ ನಿಯಮಾವಳಿಯಿಂದಾಗಿ ಮುಂದೂಡಲಾಗಿದೆ.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



ಆತ್ಮೀಯ ಸಮಾಜ ಬಾಂಧವರೇ,

ಬಂಟರ ಸಂಘದ ಮುಖವಾಣಿಗೆಯಾದ ಸ್ನೇಹ-ಚಿಂತನೆ ಪತ್ರಿಕೆಯು ಕೆಲವು ತಿಂಗಳುಗಳು ಹೊರಬರಲಿಲ್ಲ. ಕೋವಿಡ್‌ನ ಆರ್ಥಿಕ ಒತ್ತಡಕ್ಕೆ ಒಳಗಾದ ಸಂಘಕ್ಕೆ ಚೇತರಿಸಿಕೊಳ್ಳುವುದು ಬಹಳ ಕಷ್ಟಕರವಾಗುತ್ತಿದೆ. ಹಾಗಾಗಿ ಕೆಲವೊಂದು ಅನಗತ್ಯ ಖರ್ಚುಗಳನ್ನು ನಿಲ್ಲಿಸಿ, ಅತೀ ಅಗತ್ಯದ ಸೇವೆಗೆ ತುರ್ತು ಸಹಾಯ ನೀಡುತ್ತಾ ಬಂದಿದ್ದೇವೆ.

ಆಕ್ಸಿಜನ್ ಅಭಿಯಾನ: ಸದಸ್ಯರ ಹಾಗೂ ದಾನಿಗಳ ಸಹಕಾರದಿಂದ ಸಂಘದ ಸದಸ್ಯರು ಹಾಗೂ ಸಾರ್ವಜನಿಕರಿಗೆ ಉಚಿತ ಆಕ್ಸಿಜನ್ ಅಭಿಯಾನ ಹಮ್ಮಿಕೊಳ್ಳಲಾಯಿತು. ಸುಮಾರು 25 ಆಕ್ಸಿಜನ್ ಕಾನ್ಸಂಟ್ರೇಟರ್ ಖರೀದಿಸಿ ಸುಮಾರು 100 ಕ್ಕೂ ಹೆಚ್ಚು ಜನರ ಉಸಿರಿಗೆ ಉಸಿರಾಗುವ ಪುಣ್ಯಕಾರ್ಯವನ್ನು ಮಾಡಲಾಯಿತು. ಈ ಕಾರ್ಯಕ್ರಮವನ್ನು ರಾಜ್ಯದ ಉಪಮುಂಖ್ಯಮಂತ್ರಿಯವರಾದ ಡಾ. ಅಶ್ವಥ ನಾರಾಯಣರವರು ಉದ್ಘಾಟಿಸಿದರು. ಹಾಗೂ ಸಂಘದ ಆವರಣದಲ್ಲಿ ಕೋವಿಡ್ ಕೇರ್ ಸೆಂಟರನ್ನು ಆರಂಭಿಸಲಾಗಿತ್ತು.

**ಆಪತ್ಬಾಂಧವ:** 85 ಜನ ವೈದ್ಯರ ತಂಡ ಕೋವಿಡ್ ಪೀಡಿತರಿಗೆ ವೈದ್ಯರ ಆಪ್ತ ಸಮಾಲೋಚನೆಯ ಮೂಲಕ ಧೈರ್ಯ ತುಂಬಿ ಕೋವಿಡನ್ನು ಹೇಗೆ ಎದುರಿಸಬೇಕು ಎನ್ನುವುದರ ಬಗ್ಗೆ ಬಹುಪಯೋಗಿ ಮಾಹಿತಿ ನೀಡಲಾಯಿತು. ವೈದ್ಯಕೀಯ ವಿಭಾಗದ ಚೇರ್‌ಮೆನ್ ಡಾ. ನಿಶಾಕಾಂತ್ ಶೆಟ್ಟಿ ಮತ್ತು ಸಂಚಾಲಕರಾದ ಡಾ. ವಿಭಾ ಶೆಟ್ಟಿ ಅವರ ನೇತೃತ್ವದಲ್ಲಿ ಈ ಎರಡೂ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮಕ್ಕೆ ಮುಖ್ಯವಾಗಿ ಸಹಕರಿಸಿದ ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನದ ಶಿಕ್ಷಕರು, ಆಡಳಿತ ಮಂಡಳಿಯ ಸದಸ್ಯರಿಗೆ ಹಾಗೂ ಸಮಸ್ತ ವೈದ್ಯರ ತಂಡಕ್ಕೆ ಧನ್ಯವಾದಗಳು.

**ಕೋವಿಡ್-19 ಉಚಿತಾ ಲಸಿಕಾ ಅಭಿಯಾನ:** ಸಮಾಜ ಸೇವಾ ಸಮಿತಿ ಮತ್ತು ಸೇವಾದಳದ ಚೇರ್‌ಪರ್ಸನ್ ಶ್ರೀ ಉಮೇಶ್ ಶೆಟ್ಟಿ ಎಂ.ಬಿ ಮತ್ತು ಸಮಾಜ ಸೇವಾ ಸಮಿತಿಯ ಸಂಚಾಲಕರಾದ ಶ್ರೀ ಅಜಿತ್ ಶೆಟ್ಟಿ ಉಳ್ತೂರು ಮತ್ತು ಸೇವಾದಳದ ಸಂಚಾಲಕರಾದ ಶ್ರೀ ಭಾಸ್ಕರ ಶೆಟ್ಟಿಯವರ ನೇತೃತ್ವದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ಸಂಘದ ಸದಸ್ಯರು, ಸಾರ್ವಜನಿಕರು, ಶಾಲೆಯ ಸಿಬ್ಬಂದಿ ಮತ್ತು ಪೋಷಕರಿಗೆ ಉಚಿತವಾಗಿ ಲಸಿಕೆಯನ್ನು ನೀಡಲಾಯಿತು.

**ದಿನಸಿ ಕಿಟ್:** ಕಳೆದ ವರ್ಷದಂತೆ ಈ ವರ್ಷವೂ ಕೂಡ ದಿನದಿತ್ಯದ ಊಟಕ್ಕೂ ತೊಂದರೆ ಇರುವವರನ್ನು ಗಮನಿಸಿ, ಬಹಳಷ್ಟು ಜನರಿಗೆ ಉಚಿತವಾಗಿ ಅಡುಗೆಯ ದಿನಸಿ ಕಿಟ್ ನೀಡಲಾಯಿತು.

ಕೋವಿಡ್‌ನಿಂದ ಅನಾರೋಗ್ಯಕ್ಕೆ ಒಳಗಾದ ಸಂತ್ರಸ್ತರಿಗೆ ಸಂಘದಿಂದ ಧನಸಹಾಯ ಹಾಗೂ ಅವರ ಮಕ್ಕಳಿಗೆ ಶೈಕ್ಷಣಿಕ ಸಹಾಯ ನೀಡಲಾಯಿತು.

ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು, ಸಂಚಾಲಕರಾದ ಶ್ರೀ ಉಮೇಶ್ ಕುಮಾರ್ ಶೆಟ್ಟಿಯವರು ಆಯೋಜಿಸಿದ್ದ ತುಳು ಭಗದ್ಗೀತೆಯ ಅನ್‌ಲೈನ್ ಕಾರ್ಯಕ್ರಮ ಅರ್ಥಪೂರ್ಣವಾಗಿ ಮೂಡಿ ಬಂತು.

ಈ ಎಲ್ಲಾ ಕಾರ್ಯಕ್ರಮ ನಡೆಸಲು ನಮ್ಮ ಗೌರವಾನ್ವಿತ ಸದಸ್ಯರ ಹಾಗೂ ದಾನಿಗಳ ಸಹಕಾರಕ್ಕೆ ಸಂಘ ಸದಾ ಚಿರಋಣಿಯಾಗಿರುತ್ತದೆ.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ಜಾಗತಿಕ ಬಂಟರ ಸಂಘಗಳ ಒಕ್ಕೂಟದ ವತಿಯಿಂದ ಸಮಾಜಕಲ್ಯಾಣ ಕಾರ್ಯಕ್ರಮ ಯೋಜನೆಯಡಿ ಫಲಾನುಭವಿಗಳಿಗೆ ಚೆಕ್ ವಿತರಣೆ

ಒಂದು ಕಾಲದಲ್ಲಿ ಬಂಟರು ಕೃಷಿಯಲ್ಲಿ ಮಾತ್ರ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು ಆದರೆ ಇಂದು ಬಂಟರು ಎಲ್ಲಾ ಕ್ಷೇತ್ರಗಳಲ್ಲೂ ಇದ್ದಾರೆ. ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಹೊಟೇಲ್ ಉದ್ಯಮ, ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಬಂಟರು ಆವರಿಸಿಕೊಂಡಿದ್ದಾರೆ. ಬಂಟರು ಇಲ್ಲದ ಕ್ಷೇತ್ರಗಳೇ ಇಲ್ಲ ಎಂಬುದು ಮುಂಬಯಿಯ ಖ್ಯಾತ ಉದ್ಯಮಿ ಹೇರಂಬ ಆಗ್ರೋ ಕೆಮಿಕಲ್ಸ್‌ನ ಸಿಎಂಡಿ ಸದಾಶಿವ ಶೆಟ್ಟಿ, ಕೂಳೂರು ಕನ್ಯಾನ ಇವರ ನುಡಿ. ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಆಶ್ರಯದಲ್ಲಿ ಬಂಟ್ಸ್ ಹಾಸ್ಟೆಲ್‌ನಲ್ಲಿರುವ ಅಮೃತೋತ್ಸವ ಕಟ್ಟಡದಲ್ಲಿ ಜರಗಿದ ಸಮಾಜ ಕಲ್ಯಾಣ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಸಂಕಷ್ಟದಲ್ಲಿರುವ ಸಮಾಜ ಬಾಂಧವರಿಗೆ ಆರ್ಥಿಕ ನೆರವು ವಿತರಿಸಿ ಮಾತನಾಡಿದರು.

ಸಮಾಜದಲ್ಲಿಂದು ದೊಡ್ಡ ಸಂಖ್ಯೆಯಲ್ಲಿ ಉದ್ಯಮಿಗಳಿದ್ದಾರೆ. ತಮ್ಮ ದುಡಿಮೆಯಲ್ಲಿ ಒಂದಂಶವನ್ನು ಸಮಾಜದಲ್ಲಿರುವ ಬಡವರಿಗೆ ನೀಡಿ ಸಮಾಜದ ಋಣ ತೀರಿಸೋಣ ಎಂದರು. ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಸಮಾಜ ಕಲ್ಯಾಣ ಕೆಲಸವನ್ನು ಮೆಚ್ಚಿದ ಸದಾಶಿವ ಶೆಟ್ಟಿ ಅವರು ಒಕ್ಕೂಟಕ್ಕೆ 10 ಲಕ್ಷ ರೂಪಾಯಿಯನ್ನು ನೀಡಿ ಒಕ್ಕೂಟದ ಮಹಾ ಪೋಷಕರಾದರು.

ಸದಾಶಿವ ಶೆಟ್ಟಿ ಅವರು ಮುಂಬಯಿಯಲ್ಲಿ ರಾಸಾಯನಿಕ ಗೊಬ್ಬರ ಉತ್ಪಾದನೆ ಮತ್ತು ರಫ್ತು ವಹಿವಾಟು ನಡೆಸುವ ಅಂತರಾಷ್ಟ್ರೀಯ ಮಟ್ಟದ ಸಂಸ್ಥೆಯನ್ನು ಹೊಂದಿದ್ದು, ಇವರು ತನ್ನ ವಿದ್ಯಾಭ್ಯಾಸದ ಅವಧಿಯಲ್ಲಿ ಬಂಟರ ಸಂಘದ ನೆರವನ್ನು ಸ್ಮರಿಸಿ ಅಶಕ್ತ ಬಂಟ ಸಮುದಾಯದ ಸಂಕಷ್ಟಕ್ಕೆ ತನ್ನಿಂದಾದ ಸಹಾಯವನ್ನು ಮಾಡುವುದಾಗಿ ತಿಳಿಸಿ ಐಕಳ ಹರೀಶ್ ಶೆಟ್ಟಿ ಅವರ ಸಮಾಜಮುಖಿ ಚಿಂತನೆ ಕೆಲಸ ಕಾರ್ಯಗಳನ್ನು ಶ್ಲಾಘಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಶ್ರೀ ಐಕಳ ಹರೀಶ್ ಶೆಟ್ಟಿ ವಹಿಸಿದ್ದರು. ಸಮಾಜದಲ್ಲಿಂದು ಕೊರೊನಾದಂತಹ ಸಂಕಷ್ಟ ಕಾಲದಲ್ಲಿ ಜನರು ಬಾರೀ ಕಷ್ಟದಲ್ಲಿದ್ದಾರೆ. ಬಡ ಜನರ ಸಮಸ್ಯೆಗಳಿಗೆ ಸ್ಪಂದಿಸುವುದೇ ಒಕ್ಕೂಟದ ಉದ್ದೇಶ. ನಮ್ಮಲ್ಲಿ ಬಹಳಷ್ಟು ಮಂದಿ ಉದ್ಯಮಿಗಳು ಇದ್ದಾರೆ. ಅವರು ಕೂಡಾ ಸಮಾಜದಲ್ಲಿರುವ ಬಡ ಜನರ ಕಷ್ಟಗಳಿಗೆ ಸ್ಪಂದಿಸುವಂತಾಗಲಿ ಎಂದು ತಿಳಿಸಿದರು. ಸಮಾರಂಭದಲ್ಲಿ 11 ಮಂದಿಗೆ ವೈದ್ಯಕೀಯ ಚಿಕಿತ್ಸೆಗೆ, ಮೂರು ಮಂದಿಗೆ ಮನೆ ನಿರ್ಮಾಣಕ್ಕೆ, 13 ಮಂದಿ ಹೆಣ್ಣು ಮಕ್ಕಳ ಮದುವೆಗೆ ಆರ್ಥಿಕ ನೆರವು ವಿತರಿಸಲಾಯಿತು. ಸಮಾರಂಭದಲ್ಲಿ ಒಕ್ಕೂಟದ ಉಪಾಧ್ಯಕ್ಷ ಶ್ರೀ ಕರ್ನಿರೆ ವಿಶ್ವನಾಥ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ಜತೆ ಕಾರ್ಯದರ್ಶಿ ಶ್ರೀ ಸತೀಶ್ ಅಡಪ ಸಂಕಬೈಲ್, ಮಾಜೀ ಕೋಶಾಧಿಕಾರಿ ಶ್ರೀ ಕೊಲ್ಲಾಡಿ ಬಾಲಕೃಷ್ಣ ರೈ, ಶ್ರೀ ಸುರೇಶ್ ಶೆಟ್ಟಿ ಪಡುಬಿದ್ರೆ, ಶ್ರೀ ಲೋಕಯ್ಯ ಶೆಟ್ಟಿ ಕಾರ್ಯದರ್ಶಿ ಬಂಟ್ಸ್ ಸಂಘ ಸುರತ್ಕಲ್, ಶ್ರೀ ಪುಷ್ಪರಾಜ ಶೆಟ್ಟಿ ಕುಡುಂಬೂರು ಆಹ್ವಾನಿತರು, ಶ್ರೀ ಜಗನ್ನಾಥ ಶೆಟ್ಟಿ ಬಾಳ ವಿಶೇಷ ಆಹ್ವಾನಿತರು, ಶ್ರೀ ದೇವಪ್ಪ ಶೇಖ ಅಧ್ಯಕ್ಷರು, ಶ್ರೀ ಅಮರೇಶ್ ಶೆಟ್ಟಿ, ಶ್ರೀ ಅರವಿಂದ್ ರೈ ಬಂಟ್ಸ್ ಸಂಘ ಸಾಲೆತ್ತೂರು, ಒಕ್ಕೂಟದ ಆಡಳಿತಾಧಿಕಾರಿ ಶ್ರೀ ಸಚ್ಚಿದಾನಂದ ಹೆಗ್ಡೆ ಕೊಳ್ಕೆಬೈಲ್, ಸಿಬ್ಬಂದಿಗಳು ಹಾಗೂ ಫಲಾನುಭವಿಗಳು ಉಪಸ್ಥಿತರಿದ್ದರು.

ಈ ಸಮಾರಂಭದಲ್ಲಿ ಶ್ರೀ ಜಯಕರ ಶೆಟ್ಟಿ ಇಂದ್ರಾಳಿ ಪ್ರಸ್ತಾವನೆ ಗೈದು ಸ್ವಾಗತಿಸಿದರು. ಶ್ರೀ ಸತೀಶ್ ಅಡಪ್ಪ ಸಂಕಬೈಲ್ ಕಾರ್ಯಕ್ರಮ ನಿರ್ವಹಿಸಿದರು. ಒಕ್ಕೂಟದ ಮಹಾಪೋಷಕರಾಗಿ ಒಕ್ಕೂಟಕ್ಕೆ 10 ಲಕ್ಷ ರೂಪಾಯಿ ದೇಣಿಗೆ ನೀಡಿದ ಸದಾಶಿವ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು.

# ಕುಂದಗನ್ನಡ

ಕನ್ನಡದ ಆಡುಭಾಷೆಯಲ್ಲಿ ಪ್ರಾದೇಶಿಕ ವೈವಿಧ್ಯತೆಯನ್ನು ಕಾಣಬಹುದು. ಮೈಸೂರು, ಮಂಡ್ಯ, ಬೆಂಗಳೂರಿನವರ ಕನ್ನಡ ಒಂದು ರೀತಿಯದ್ದಾದರೆ, ಧಾರವಾಡ, ಬಿಜಾಪುರ, ಬೆಳಗಾವಿಯ ಜನ ಮಾತನಾಡುವ ಕನ್ನಡ ಭಾಷೆಯ ಸ್ವರೂಪ ಬೇರೆಯೇ ಆಗಿ ಕಾಣಬರುತ್ತದೆ. ಇವರ ಭಾಷೆಯಲ್ಲಿ ಮರಾಠಿ ಭಾಷೆಯ ಪ್ರಭಾವ ನಿಚ್ಚಳವಾಗಿ ಕಾಣಬರುತ್ತದೆ. ಬೀದರ, ಗುಲ್ಬರ್ಗ, ರಾಯಚೂರಿನ ಜನರ ಕನ್ನಡ ಉರ್ದು ಶಬ್ದಗಳಿಂದ ತುಂಬಿರುತ್ತದೆ. ಅಲ್ಪ ಸ್ವಲ್ಪ ತೆಲುಗು ಭಾಷೆಯ ಪ್ರಭಾವವೂ ಇಲ್ಲಿನವರ ಕನ್ನಡ ಆಡುಮಾತಿನಲ್ಲಿ ಕಾಣಸಿಗುತ್ತದೆ. ಬಳ್ಳಾರಿ ಮತ್ತು ಕೋಲಾರದವರ ಕನ್ನಡದಲ್ಲಿ ತೆಲುಗು ಪದೋಚ್ಚಾರದ ಛಾಯೆಯನ್ನು ಕಾಣಬಹುದಾದರೆ, ಕೊಡಗರ ಕನ್ನಡದಲ್ಲಿ ತಮಿಳು, ಮಲಯಾಳಂ ಹಾಗೂ ತುಳು ಭಾಷೆಗಳು ವಿಪುಲವಾಗಿ ಬೆರೆತಿರುತ್ತವೆ.

ಆದರೆ, ಕುಂದಾಪುರದವರ ಕನ್ನಡ ಇವೆಲ್ಲವುಕ್ಕಿಂತ ವಿಭಿನ್ನವಾಗಿದೆ. ಬಡಗು ತುಳುನಾಡಿನ ಜನ ಮಾತನಾಡುವ ಕನ್ನಡ, ಕನ್ನಡನಾಡಿನ ತಿರುಳು ಭಾಗದ ಕನ್ನಡವಲ್ಲ. ಅದನ್ನು ಕುಂದಗನ್ನಡವೆಂದು ಕರೆಯುವ ಪರಿಪಾಠವೂ ಇದೆ. ಆದರೆ ಕುಂದಗನ್ನಡದ ಸೃಷ್ಟಿಗೆ ಯಾವ ಅನ್ಯ ಭಾಷೆ ಪ್ರಭಾವ ಬೀರಿತ್ತು? ಎನ್ನುವುದನ್ನು ಅಂದಾಜಿಸುವುದು ಕಷ್ಟ. ಕುಂದಗನ್ನಡ ಭಾಷೆ ಭಿನ್ನವಾಗಿರುವುದಕ್ಕೆ ಅನ್ಯ ಭಾಷೆಗಳ ಶಬ್ದಗಳ ಸೇರ್ಪಡೆಗಿಂತ ಶಬ್ದ ಪ್ರಯೋಗದಲ್ಲಿ ಪ್ರಕೃತಿ+ಪ್ರತ್ಯಯಗಳ ಸೇರಿಕೆಯಲ್ಲಾಗುವ ವ್ಯತ್ಯಾಸ ಮುಖ್ಯ ಕಾರಣವಾಗುತ್ತದೆ. ಜೊತೆಗೆ ಸ್ವರಗಳ ವ್ಯತ್ಯಾಸವೂ ಅಷ್ಟೇ ಮುಖ್ಯವಾಗಿರುತ್ತದೆ. ಕನ್ನಡ ಕುಂದಾಪುರದ ಕಡೆಯ ಜನರ ಮಾತೃಭಾಷೆ ಯಲ್ಲವೆನ್ನುವುದಕ್ಕೆ ಈ ಕೆಳಗಿನ ಕಾರಣಗಳಿವೆ;

1. ಕನ್ನಡ ವರ್ಣಮಾಲೆಯಲ್ಲಿ 49 ಅಕ್ಷರಗಳು ಇವೆ. (ಸಂಸ್ಕೃತದಲ್ಲಿ 52 ಅಕ್ಷರಗಳಿವೆ. ಋ, ೠ ಸ್ವರಗಳು ಮತ್ತು 3 ಯೋಗವಾಹಗಳು ಕನ್ನಡ ವರ್ಣಮಾಲೆಯಲ್ಲಿ ಇಲ್ಲ. ಬದಲು ಎ, ಒ, ವ, ವಿ, ಕುಳ ಎಂಬ 5 ದೇಶೀಯ ಅಕ್ಷರಗಳು ಇವೆ.) ಬಡಗು ತುಳುನಾಡಿನ ಜನ ಮಾತನಾಡುವಾಗ ಇವುಗಳಲ್ಲಿ ಬಹಳಷ್ಟು ಅಕ್ಷರಗಳನ್ನು ಬಳಸುವುದೇ ಇಲ್ಲ. ಬದಲು ಕನ್ನಡ ವರ್ಣಮಾಲೆ–ಯಲ್ಲಿಲ್ಲದ ಅನ್ಯ ಅಕ್ಷರಗಳನ್ನು ಬಳಸುತ್ತಾರೆ.

2. ಉಚ್ಚಾರಗಳಲ್ಲಾಗುವ ಪರಿವರ್ತನೆ. ಶಾಲೆ ಕಾಲೇಜುಗಳಲ್ಲಿ ಪಠ್ಯಪುಸ್ತಕದ ಕನ್ನಡವನ್ನು ರೂಢಿಸಿಕೊಂಡವರ ಹೊರತಾಗಿ ಕುಂದಗನ್ನಡ ಮಾತನಾಡುವ ಇತರರು ಶುದ್ಧ ಕನ್ನಡ ಶಬ್ದಗಳನ್ನು ಉಚ್ಚರಿಸಲು ಬಹಳಷ್ಟು ಕಷ್ಟಪಡುತ್ತಾರೆ. ದೈನಂದಿನ ಮಾತುಕತೆಯಲ್ಲಿ ಬಹಳಷ್ಟು ಅಕ್ಷರಗಳನ್ನು ಲುಪ್ತಗೊಳಿಸಿ ಮಾತನಾಡುವ ಪರಿಪಾಠವನ್ನು ಅವರು ಹೊಂದಿದ್ದಾರೆ.

3. ಉಚ್ಚಾರಗಳಲ್ಲಿ ವರ್ಣ ಪಲ್ಲಟ ಕಾಣಸಿಗುತ್ತದೆ. ಎರಡು ವರ್ಣಗಳನ್ನು ಜೊತೆಯಾಗಿ ಉಚ್ಚರಿಸುವಾಗ ಒತ್ತಕ್ಷರವಾಗುವ ಬದಲಿಗೆ ವರ್ಣ ಬದಲಾಗುತ್ತದೆ.

4. ಸ್ವರವನ್ನು ಸಾಕಷ್ಟು ಬಾಯಿ ತೆರೆಯದೆ ಸಂವೃತ್ತವಾಗಿ ಉಚ್ಚರಿಸುವ ಅಭ್ಯಾಸ ಬಡಗ ಪ್ರದೇಶದವರಿಗಿದೆ. ಬಾಯಿ ತೆರೆದು ಹೇಳುವಾಗ ಅದೇ ಶಬ್ದವನ್ನು ಬಾಯಿ ಮುಚ್ಚಿ ಹೇಳಿದಾಗ ಬರುವ ಶಬ್ದಕ್ಕಿಂತ ಬೇರೆಯೇ ಅರ್ಥ ಬರುತ್ತದೆ.

5. ಕನ್ನಡದಲ್ಲಿ ಮೂರು ಲಿಂಗಗಳಿವೆ. ತುಳುವಿನಲ್ಲಿ ನಾಲ್ಕು ಲಿಂಗಗಳಿವೆ. ಆದರೆ, ಕುಂದಗನ್ನಡ ಮಾತನಾಡುವವರು ಬಹಳಷ್ಟು ಸಂದರ್ಭದಲ್ಲಿ ಭಿನ್ನ ಲಿಂಗಗಳನ್ನು ಬಳಸುವ ಬದಲು ನಪುಂಸಕ ಲಿಂಗವೊಂದನ್ನೇ ಬಳಸುವ ಪರಿಪಾಠವನ್ನು ಹೊಂದಿದ್ದಾರೆ.

6. ಕೆಲವು ಹಳೆಯ ದ್ರಾವಿಡ ಪ್ರತ್ಯಯಗಳನ್ನು ಬಳಕೆಯ ಅನುಕೂಲತೆಗಾಗಿ ಅಕ್ಷರಲೋಪಕ್ಕೆ ಒಳಪಡಿಸಿ, ತಲೆಬಾಲಗಳನ್ನು ಕಳೆದು ವಿರೂಪಗೊಳಿಸಿ ಉಚ್ಚಾರಣೆಗೆ ಸುಲಭವನ್ನಾಗಿ ಮಾಡುವುದು. ಈ ರೀತಿಯ ಅಂಗಭಂಗ ಶಬ್ದ ಪ್ರಯೋಗದಿಂದ ಅನ್ಯ ಪ್ರದೇಶದ ಕೇಳುಗರಿಗೆ

ಅವರ ಮಾತನ್ನು ಅರ್ಥೈಸಿಕೊಳ್ಳುವುದು ಕಷ್ಟವಾಗುತ್ತದೆ.

7. ಸಾಮಾನ್ಯವಾಗಿ ಎಲ್ಲಾ ಪ್ರಾಚೀನ ಭಾಷೆಗಳಲ್ಲಿ – ಹಳೆಯ, ನಡು ಮತ್ತು ಆಧುನಿಕ ರೂಪಗಳನ್ನು ಕಾಣಬಹುದಾಗಿದೆ. ಕನ್ನಡದಲ್ಲಿ–ಹಳೆಗನ್ನಡ, ನಡುಗನ್ನಡ ಹಾಗೂ ಆಧುನಿಕ ಕನ್ನಡ ಎನ್ನುವ ವೈವಿಧ್ಯಗಳಿವೆ. ಕುಂದಗನ್ನಡ – ಯಾವ ಹಂತದ ಕನ್ನಡದಿಂದ ರೂಪುಗೊಂಡಿತು ಎನ್ನುವುದನ್ನು ಅಂದಾಜಿಸುವುದು ಕಷ್ಟ.

ಸೀತಾನದಿಯ ದಕ್ಷಿಣಕ್ಕಿರುವ ಜನ ತುಳುಭಾಷೆಯನ್ನೇ ಸಂಪರ್ಕದ ಹಾಗೂ ವ್ಯವಹಾರದ ಭಾಷೆಯನ್ನಾಗಿ ಉಪಯೋಗಿಸುವುದನ್ನು ಮುಂದುವರಿಸಿಕೊಂಡು ಬಂದಿದ್ದರೂ, ಕನ್ನಡ ಭಾಷೆಯನ್ನು ಆಡಳಿತದ ಹಾಗೂ ಕಲಿಕೆಯ ಮತ್ತು ಸಾಹಿತ್ಯದ ಭಾಷೆಯನ್ನಾಗಿ ಅಳವಡಿಸಿಕೊಂಡಿದ್ದಾರೆ. ಬ್ರಹ್ಮಾವರದ ಉತ್ತರಕ್ಕಿರುವ ಗೌಡಸಾರಸ್ವತರು, ಕ್ರಿಶ್ಚನರಾದಿಯಾಗಿ ಕೊಂಕಣಿ ಮಾತೃಭಾಷಿಕರು, ಮರಾಠಿಗರು ಮತ್ತು ಮುಸಲ್ಮಾನರು ತಮ್ಮ ತಮ್ಮ ಭಾಷೆಯನ್ನು ಮನೆ ಭಾಷೆಯಾಗಿ ಉಳಿಸಿಕೊಂಡಿದ್ದರೆ, ಬ್ರಾಹ್ಮಣ / ನಾಡವ / ಮೊಗೇರ / ಬಿಲ್ಲವ ಇತ್ಯಾದಿ ತುಳುಜಾತಿಯ ವಲಸೆಗಾರರು ಕನ್ನಡಿಗರೊಡನೆ ವೈವಾಹಿಕ ಸಂಬಂಧ ಬೆಳೆಸಿ ಕನ್ನಡ ಭಾಷೆಯನ್ನು ರೂಢಿಸಿಕೊಂಡು ತುಳುಭಾಷೆಯನ್ನು ಮರೆತು ಬಿಟ್ಟಿದ್ದಾರೆ ಎನ್ನುವ ಅಭಿಪ್ರಾಯವಿದೆ.

**ಶ್ರೀ ಬಿ. ಸಚ್ಚಿದಾನಂದ ಹೆಗ್ಡೆಯವರ ಲೇಖನದ ಆಯ್ದ ಭಾಗ**

## ಶ್ರೀ ಹರಿಯ ಕೀರ್ತನೆ (ಭಜನೆ)

ಸಾರ್ವಭೌಮನೆ ದೊರೆಯೆ ಬೇಸರಾಗಿದೆ ಬಾರೊ ।
ಸರ್ವೋತ್ತಮನೆ ಬಾರೊ ಶ್ರೀ ಉಡುಪಿ ಕೃಷ್ಣ ॥ ಪಲ್ಲ ॥
ಬೇಸರಾಗಿದೆ ದೇವ ಜಗದ ಜನರನು ಕಂಡು ।
ಲೇಸ ಕಾಣದೆ ಹೋದೆ ಈ ತನುವ ಹೊಂದಿ ॥
ಘಾಸಿ ಮಾಡೆನು ದೇವ ಬಾಳ ನಾಟಕದಲ್ಲಿ ।
ಪೋಸಿಸಯ್ಯಾ ಎನ್ನ ಯದುಕುಲೋತ್ತುಮನೆ ॥

ಹೊತ್ತು ಹೊತ್ತಿಗೆ ಅನ್ನವಿಟ್ಟವರ ದೂರುವರು ।
ಹೆತ್ತ ತಾಯ್ತಂದೆಯರ ಕಿತ್ತು ತಿನ್ನುವರಯ್ಯ ॥
ಗೊತ್ತುಗುರಿಯಿಲ್ಲದ ಎತ್ತಣದ ಪಯಣವಿದು ।
ಸತ್ಯಮಾರ್ಗವ ತೋರು ಶ್ರೀ ರಾಮಚಂದ್ರ ॥

ಪ್ರೀತಿಸುವ ಸತಿ ಸುತರು ಧನ ಕನಕವಿರುವತನಕ ।
ಖ್ಯಾತಿ ಪಡೆದೊಡೆ ಬರುವ ಬಂಧು ಬಾಂಧವರು ॥
ನೀತಿಬಾಹಿರರೊಡನೆ ಯಾತರದ ಸಂಬಂಧ ।
ಜ್ಯೋತಿ ಆರುವ ಮೊದಲೆ ಬಾರೋ ಶ್ರೀ ಹರಿಯೇ ॥


**ರಚನೆ: ಟಿ. ಭುಜಂಗ ಹೆಗ್ಡೆ**

## ಕೋವಿಡ್–19 ಉಚಿತ ಲಸಿಕಾ ಅಭಿಯಾನ

**ಹುಬ್ಬಳ್ಳಿ–ಧಾರವಾಡ ಬಂಟರ ಸಂಘದ** ವತಿಯಿಂದ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಸುಭಾಶ್ಚಂದ್ರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಮ್ಮ ವಿದ್ಯಾ ಸಂಸ್ಥೆಯಾದ ಶ್ರೀ ಆರ್.ಎನ್.ಎಸ್ ವಿದ್ಯಾನಿಕೇತನ ಸಂಸ್ಥೆಯ ಸಂಕೀರ್ಣದಲ್ಲಿ ದಿನಾಂಕ 07.07.2021ರಂದು ನಮ್ಮ ಸಮಾಜ ಬಾಂಧವರಿಗೂ ಹಾಗೂ ಶಾಲಾ ವಿದ್ಯಾರ್ಥಿಗಳ ಪೋಷಕರನ್ನೊಳಗೊಂಡು ಸುಮಾರು 500 ಜನರ ಮೇಲ್ಪಟ್ಟು ಉಚಿತ ಲಸಿಕೆಯನ್ನು ನೀಡಲಾಯಿತು. ಈ ಕಾರ್ಯಕ್ರಮವನ್ನು ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಶರ್ಮಿಲಾ ಎಸ್. ಹೊಸೂರ್ ಇವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಈ ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳು, ಮಾಜಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಹಾಜರಿದ್ದರು. ಈ ಸಂದರ್ಭದಲ್ಲಿ ಲಸಿಕೆ ಅಭಿಯಾನಕ್ಕೆ ಸಹಕರಿಸಿದ ಆರೋಗ್ಯ ಸಂಸ್ಥೆಯ ಡಾ। ಅರವಿಂದ ಶೆಟ್ಟಿ ಮತ್ತು ವೈದ್ಯಕೀಯ ಸಮಿತಿಯ ಸಂಚಾಲಕರಾದ ಡಾ। ಕೆ. ಧನಪಾಲ್ ಹೆಗ್ಡೆ ಹಾಗೂ ಸಂಘದ ಕಾರ್ಯಕರ್ತರಾದ ಶ್ರೀ ಪ್ರಕಾಶ್ ಶೆಟ್ಟಿಯವರನ್ನು ಸನ್ಮಾನಿಸಲಾಯಿತು.

# ವಿವಾಹ ಯುವಜನರ ಕರ್ತವ್ಯ ಪರಿಪಾಲನೆ



ರೊ। ಕೃಷ್ಣ. ಎ. ಶೆಟ್ಟಿ
ಕುಂಜತ್ತೂರು

ನಾಗರಿಕ ದೇಶ ಎಂದು ಕರೆಯಲ್ಪಡುವುದು ಒಂದು ದೇಶದ ಭೌಗೋಳಿಕ ಲಕ್ಷಣದಿಂದಲ್ಲ. ಬದಲಾಗಿ ಒಂದು ದೇಶದ ಜನರ ಆಚಾರ ವಿಚಾರ ನಡವಳಿಕೆಗಳಿಂದ. ಸುಸಂಸ್ಕೃತ ನಡವಳಿಕೆಯ ಜನರೇ ನಾಗರಿಕ ಪ್ರಜೆಗಳಾಗಿ ನಾಗರಿಕ ದೇಶ ಎಂದು ಮನ್ನಣೆ ಪಡೆಯುತ್ತಾರೆ. ಭಾರತ ದೇಶವು ನಾಗರಿಕತೆಯ ತೊಟ್ಟಿಲು ಎಂದು ಖ್ಯಾತಿ ಪಡೆಯಲು ಹರಪ್ಪ, ಮೊಹೆಂಜೆದಾರೋ ನಾಗರಿಕ ಸಂಸ್ಕೃತಿಯೇ ಕಾರಣ. ಭಾರತ ದೇಶದ ಹಿರಿಮೆ, ನಮ್ಮ ಹಿರಿಮೆಗೆ ಕಾರಣ. ಭಾರತ ದೇಶದ ಜನರ ಸುಸಂಸ್ಕೃತ ಜೀವನ ಪದ್ದತಿ ನಾಗರಿಕತೆಗೆ ಬುನಾದಿಯಾಗಿದೆ. ಭಾರತೀಯರ ಸುಸಂಸ್ಕೃತ ಜೀವನ ಪದ್ಧತಿ ನಮ್ಮ ನಾಗರಿಕತೆಗೆ ಹೇಗೆ ಪೂರಕವಾಗಿದೆ ಎಂದು ತಿಳಿಯೋಣ.

ಮಾನವನ ಜೀವನ ಚಕ್ರದಲ್ಲಿ ಬಾಲ್ಯ, ಯೌವನ, ವೃದ್ಧಾಪ್ಯ ಎಂಬ ಮೂರು ಹಂತದಲ್ಲಿ ವಿವಾಹ, ದಾಂಪತ್ಯ ಎಂಬ ಎರಡು ಘಟ್ಟಗಳಲ್ಲಿ ತನ್ನ ನಾಗರಿಕ ಜೀವನವನ್ನು ಸಾಗಿಸುತ್ತಾನೆ. ವಿವಾಹ ನಾಗರಿಕ ಜೀವನದ ಮೂಲ. ವಿವಾಹ ಸತ್ಪ್ರಜೆಗಳ ಹುಟ್ಟಿಗೆ ಬುನಾದಿ.

ಯೌವನದ ಹುಚ್ಚು ಹೊಳೆ ಹರಿದು ಪೋಲಾಗದಂತೆ ತಡೆಯಲು ವಿವಾಹ ಎಂಬ ಅಣೆಕಟ್ಟನ್ನು ಕಟ್ಟಿ ಸುವ್ಯವಸ್ಥೆ ಮಾಡುತ್ತಾರೆ. ಮದುವೆ ಎಂಬುದು ಸಾಮಾಜಿಕ ವ್ಯವಸ್ಥೆಯಲ್ಲಿ ಶಿಸ್ತುಬದ್ಧ ಸುಸಂಸ್ಕೃತ ಜೀವನಕ್ಕೆ ದಾರಿ.

ಕೆಲವರಿಗೆ ವಿವಾಹ ಜೇನು (ಮಧು) ಕೆಲವರಿಗೆ ನೇಣು. ವಿವಾಹ ಎಂಬ ಕುದುರೆಯನ್ನೇರಿದಾಗ ಕುದುರೆಯ ಸವಾರನ ನಡತೆಯ ಮೇಲೆ ಜೇನು ಅಥವಾ ನೇಣು ಆಗಿರುತ್ತದೆ. ಕಿವಿಯಾರೆ ಕೇಳಿದರೂ ಕಣ್ಣಾರೆ ಕಂಡರೂ ಅನುಭವಿಸಿ ತಿಳಿಯಬೇಕೆಂದು ವಿವಾಹವಾಗುತ್ತಾರೆ.

ಯೌವನ ಎಂಬ ವನದಲ್ಲಿ ನದಿ ಹರಿದಂತೆ ಇದು ಕೆಲವರಲ್ಲಿ ಗುಪ್ತದಾಮಿನಿಯಾಗಿ ಕೆಲವರಲ್ಲಿ ಭೋರ್ಗರೆದು ಹರಿಯುತ್ತದೆ. ಈ ಹುಚ್ಚು ಹೊಳೆಯನ್ನು ನಿಯಂತ್ರಿಸಿ ಹತೋಟಿಯಲ್ಲಿಟ್ಟು ನಡೆಯುವವನೇ ಶೂರ ಸುಸಂಸ್ಕೃತ ನಾಗರಿಕ. ವಿವಾಹ ಎಂಬ ಬಂಧನದಲ್ಲಿದ್ದು ಚಾತುರ್ಯದಿಂದ ಹೊಗಳಿಕೆಗೆ ಹಿಗ್ಗದೆ ತೆಗಳಿಕೆಗೆ ಕುಗ್ಗದೆ ಸಮತೋಲನದ ನಾಗರಿಕತೆಯಿಂದ ವಿವಾಹ ಎಂಬ ಭಾರವನ್ನು ನಿಭಾಯಿಸಿ ದಾಂಪತ್ಯದ ಕರ್ತವ್ಯಗಳನ್ನು ಶಿಸ್ತುಬದ್ಧವಾಗಿ ಮುನ್ನಡೆಸಿದಾಗ ಮದುವೆಯ ಈ ಬಂಧ ಅನುರಾಗದ ಅನುಬಂಧವಾಗಿ ಬಾಂಧವ್ಯ ಕುದುರುತ್ತದೆ. ಈ ಸುಸಂಸ್ಕೃತ ಬಾಂಧವ್ಯವೇ, ಸುಸಂಸ್ಕೃತ ಮಕ್ಕಳನ್ನು, ಪ್ರಜೆಗಳನ್ನು ಹುಟ್ಟು ಹಾಕಿದಾಗ ಈ ಅನುಬಂಧ ಏಳೇಳು ಜನ್ಮದಲ್ಲೂ ತೀರದ ಸಂಬಂಧವಾಗುತ್ತದೆ.

ವಿವಾಹ ಅಂದರೆ ಜವಾಬ್ದಾರಿ ಹೊರುವುದು, ಮದುವೆಯ ಈ ಬಂಧ ಜನುಮ ಜನುಮದ ಅನುಬಂಧ ಅನುರಾಗದ ಜಂಜಾಟ. ಆ ಅನುರಾಗದ ಜಂಜಾಟ ನಿಭಾಯಿಸವುದೇ ದಾಂಪತ್ಯದ ಜಯ. Successful marriage ಸಮತೃಪ್ತಯ ವಿವಾಹ. ಜಗತ್ತಿನಲ್ಲಿ ಸಂತೃಪ್ತಿಯ ದಂಪತಿಗಳು ಕಾಣಸಿಗುವುದು ಅಪರೂಪ. ಆ ಅಪರೂಪದ ಸಂತೃಪ್ತಿಯ ದಂಪತಿಗಳು ಉಳುವ ಗದ್ದೆಯಲ್ಲಿ ಭೋರ್ಗರೆಯುವ ಮಳೆಯಲ್ಲಿ ಓಹೋ ಎಂದು ಅನುರಾಗದಿಂದ ಆಲಾಪನೆ ಮಾಡುತ್ತಾ ಜೋಡೆತ್ತುಗಳನ್ನು ಪ್ರೀತಿಯಿಂದ ನಡೆಸುವ ಗಂಡ, ಹಾಗೂ ಹೊಲದಲ್ಲಿ ನೇಜಿನೆಡುವ ಹೆಂಗಳೆಯರ ಜೊತೆ ಹಸುರು ಭತ್ತದ ನೇಜಿಗಳನ್ನು ನೆಡುತ್ತಾ ಓ ಬೇಲೆ ಎಂದು ಒಟ್ಟಾಗಿ ಭೂದೇವಿಯನ್ನು ಸ್ತುತಿಸುವ ಹೆಂಗಸರಿಗೆ ತಿಂಡಿ ತಿನಿಸುಗಳನ್ನು ಕೊಟ್ಟು, ಉಳುವ ತನ್ನ ಗಂಡನೊಡನೆ ಗದ್ದೆಯ ದಿಣ್ಣೆಯಲ್ಲಿ ಕುಳಿತು ತಿಂಡಿಯನ್ನು ಸವಿದು ಸಂತೃಪ್ತಿಯ ಅನುರಾಗದ ಸಲ್ಲಾಪಗಳನ್ನು ಮಾಡಿ, ಅನ್ನದ ಕಾಳುಗಳಿಗಾಗಿ ಸತಿಪತಿಯರು ಇಬ್ಬರೂ ಗದ್ದೆಯಲ್ಲಿ ಪಡುವ ಶ್ರಮ, ಜೀವನದಲ್ಲಿ ಸಂತೋಷ ಪಡುವ ಸಂತೃಪ್ತಿಯ ದಂಪತಿಗಳ ಮುಂದೆ ಇನ್ಯಾವ ದಂಪತಿಗಳೂ ಸಿಗಲಾರರು. ಇವರೇ ಸಂತೃಪ್ತಿಯ ದಂಪತಿಗಳು. ಲೌಖಿಕ ಆಕಾಂಕ್ಷೆಗಳಿಗೆ ಬಲಿಯಾಗದೆ, ಕಾಯಕವೇ ಕೈಲಾಸವೆಂದು ಜೋಡೆತ್ತುಗಳಂತೆ ದುಡಿದು,

ಭೂರಮೆಯ ಮಡಿಲಲ್ಲಿ ಪ್ರಾಕೃತಿಕ ಜೀವನ ನಡೆಸಿ ದಾಂಪತ್ಯ ಜೀವನದಲ್ಲಿ ಮಾದರಿ ದಂಪತಿ ಎನಿಸಿ ಸಾರ್ಥಕತೆ ಪಡೆಯುತ್ತಾರೆ. ಮಂಗಳಕರ ವಿವಾಹದಿಂದ ದಾಂಪತ್ಯ ಜೀವನದಲ್ಲಿ ಸುಖ, ಶಾಂತಿ. ವಿವಾಹ ಸಂಸ್ಕಾರ ದಾಂಪತ್ಯ ಸಂಹಿತೆಯ ಈ ನಡಿಗೆಯೇ ಉತ್ತಮ ಪ್ರಜೆಗಳ ನಾಗರಿಕತೆಯ ತೊಟ್ಟಿಲಾಗಿ, ಉತ್ತಮ ಪ್ರಜೆಗಳಿಂದ ಕೂಡಿದ ಸಮಾಜ ದೇಶಗಳಿಂದ ಕೂಡಿದ ಭೂಲೋಕವು ಸುಖ ಶಾಂತಿ ಸಮೃದ್ಧಿಯಿಂದ ರಾರಾಜಿಸಿ, ಸ್ವರ್ಗ ಲೋಕವನ್ನು ಮೀರಿಸುವ ಲೋಕವಾಗುತ್ತದೆ. ಪ್ರಕೃತಿಯ ಹಚ್ಚ ಹಸುರಿನ ಮಡಿಲಲ್ಲಿ, ಬೆಳೆದ ದಂಪತಿಗಳು ಪ್ರಕೃತಿಯ ಆರಾಧಕರಾಗಿ, ಸುಸಂಸ್ಕೃತ ಮಕ್ಕಳನ್ನು ಪಡೆದು ವಿವಾಹದ ಕರ್ಮವನ್ನು ಸಾಕಾರಗೊಳಿಸಿ ಪ್ರಕೃತಿ ಮಾತೆಗೆ ವಿಧೇಯರಾಗಿರುವ ಪ್ರಜೆಗಳೇ, ಪ್ರಜಾ ಪ್ರಭುತ್ವದ ಜೀವ ನಾಡಿಗಳು. ಇದೇ ಸಾರ್ಥಕತೆಯ ವಿವಾಹ. ಸಂತೃಪ್ತಿಯ ವಿವಾಹ. ಪ್ರಕೃತಿ ಪ್ರಚೋದಿತ ಕಾಮನೆಗಳು ಸರ್ವ ಜೀವಿಗಳಲ್ಲೂ ಸಾಮಾನ್ಯವಾದರೂ ಮಾನವ ಜೀವಿಯು ಬುದ್ಧಿ ಜೀವಿ ಎಂದು ಪರಿಗಣಿಸಲ್ಪಡುವುದರಿಂದ ಅದು ವ್ಯವಸ್ಥಿತವಾಗಿ ವಿವಾಹ ರೂಪವನ್ನು ಹೊಂದಿದೆ.

ನಮ್ಮ ಭಾರತ ವರ್ಷದಲ್ಲಿ ವಿವಾಹ ಪದ್ಧತಿ ಹೇಗೆ ಹುಟ್ಟಿಕೊಂಡಿತು ಎಂದು ನೋಡಿದಾಗ ಮಹಾಭಾರತ ಪುರಾಣದಲ್ಲಿ ತಿಳಿಸಿದಂತೆ ಈ ರೀತಿ ಇದೆ – ಶ್ವೇತಕೇತು ಎಂಬ ಬಾಲಕ ತಪಸ್ವಿಯು ತನ್ನ ತಂದೆ ತಾಯಿಯರೊಂದಿಗೆ ಇರಲು ಓರ್ವ ಪರಕೀಯನು ಬಂದು ತಂದೆಯ ಸಮ್ಮುಖದಲ್ಲಿ ಆತನ ತಾಯಿಯನ್ನು ಎಳೆದುಕೊಂಡು ಹೋಗುತ್ತಾನೆ. ಇದನ್ನು ಆತನ ತಂದೆ ಸುಮ್ಮನೆ ನಿಂತು, ನೋಡುತ್ತಾ ಇರುತ್ತಾನೆ. ಆಗ ಶ್ವೇತಕೇತು ಅಪ್ಪಾ, ನನ್ನ ತಾಯಿಯನ್ನು ಪರಕೀಯನೊಬ್ಬನು ಕೊಂಡೊಯ್ಯುವಾಗಲೂ ನೀನು ಯಾಕೆ ಸುಮ್ಮನಾದೆ? ಎಂದು ಕೇಳಿದಾಗ, ಶಾಸ್ತ್ರದಲ್ಲಿ ಹೆಣ್ಣನ್ನು ಯಾರು ಬೇಕಾದರೂ ಕೊಂಡೊಯ್ಯಬಹುದು ಎಂದು ಹೇಳುತ್ತದೆ ಎಂದನು. ಈ ಘಟನೆಯಿಂದ ನೊಂದ ಶ್ವೇತಕೇತು ಇಲ್ಲ, ಇನ್ನು ಮುಂದೆ ಇಂಥ ಅನಿಷ್ಟ ಕಾರ್ಯಗಳು ನಡೆಯಬಾರದು, ಓರ್ವ ಗಂಡು ಓರ್ವಳು ಹೆಣ್ಣು ಕೂಡಿ ದಾಂಪತ್ಯ ಜೀವನ ನಡೆಸಿ ಸತ್ಪುತ್ರರನ್ನು ಪಡೆಯಬೇಕು ಎಂದು ವಿವಾಹ ಪದ್ಧತಿಯನ್ನು ಜಾರಿಗೆ ತಂದನು. ಅಂದಿನಿಂದ ಇಂದಿನವರೆಗೂ ನಮ್ಮ ಭಾರತ ವರ್ಷದಲ್ಲಿ ಸತ್‌ವಿವಾಹಗಳು ನಡೆದು, ಸಪ್ತಪದಿ ತುಳಿದು ಏಳೇಳು ಜನುಮದಲ್ಲೂ ತೀರದ ಸಂಬಂಧದಂತೆ ದಂಪತಿಗಳು ಬಾಳಿ ಬದುಕಿ ಆದರ್ಶ ದಂಪತಿಗಳಾಗಿ ಸತ್ಪ್ರಜೆಗಳಿಗಾಗಿ ತಮ್ಮ ಜೀವನವನ್ನು ನಡೆಸಿ ಪ್ರಕೃತಿ ಮಾತೆಯ ವಿವಾಹದ ವರವನ್ನು ಸದ್ವಿನಿಯೋಗಿಸಿ ಕೃತಾರ್ಥ ದಂಪತಿಗಳಾಗಿದ್ದಾರೆ. ವಿವಾಹ ಸಂತೃಪ್ತಿಯನ್ನು ಹೊಂದಿ ಸತ್‌ಪುತ್ರ ಪುತ್ರಿಯರನ್ನು ಪಡೆದು ಸತ್ ಪ್ರಜಾಪ್ರಭುತ್ವಕ್ಕೆ ನಾಂದಿ ಹಾಡುತ್ತಾರೆ. ವಿವಾಹವೇ ನಾಗರಿಕತೆಯ ಮೂಲ.

ಚಂಚಲ ಚಿತ್ತವಿಲ್ಲದೆ, ನಿಸ್ವಾರ್ಥ ಪ್ರೀತಿಯಿಂದ ಆದರ್ಶ ದಂಪತಿಗಳಾಗಿ ಸುಸಂಸ್ಕೃತವಾದ ಸಪ್ತಪದಿಯನ್ನು ತುಳಿದು ಅಜ್ಜ ಅಜ್ಜಿಯಾದರೂ, ಮುದುಕಿಗೆ, ಮುದುಕನಿಗೆ ಎಲ್ಲೆಲ್ಲಿ ಮಾತಾಯಿತು, ಮುತ್ತುಗದ ಮರದ ಗೆಡ್ಡೇಲಿ, ಮುದುಕಯ್ಯ ಮುದುಕಿಗೆ ಮುದ್ದ ಕೊಡುತ್ತಿದ್ದ ಎಂಬ ಕವಿವಾಣಿಯಂತೆ ವಿವಾಹ ಬಾಂಧವ್ಯವನ್ನು ಜೀವನದ ಕೊನೆಯವರೆಗೂ ಉಳಿಸಿ ಹುಣಸೇಮರ ಮುಪ್ಪಾದರೆ ಹುಳಿ ಮುಪ್ಪೇ, ಎಂಬಂತೆ ದೇಹಕ್ಕೆ ಮುಪ್ಪು ಚೈತನ್ಯಕ್ಕಲ್ಲ ಎಂದು ಅರಿತಾಗ ವಿವಾಹವು ಸಾರ್ಥಕವಾಗಿ ಬಾಳು ಬಂಗಾರವಾಗುತ್ತದೆ.

**ವಧುವರರು ಪರಸ್ಪರ ತೊಡಿಸುವರು ಹೂಹಾರ**
**ನಡೆಸುವರು ನಂತರ ಮಧುಚಂದ್ರ, ಮುಂದೂಡಿದರೆ**
**ಆಗುವುದು ಮುದಿಚಂದ್ರ**
**ಬಂದವರು ತಿಂದು ಚೆಲ್ಲುವರು ಆಹಾರ**

ವಿವಾಹ ಯುವಜನರ ಮೋಜು ಹೌದು, ಮುಂದಿನ ಪೀಳಿಗೆಯ ಜವಾಬ್ದಾರಿಯೂ ಹೌದು. ಯುವಜನರೇ ಜವಾಬ್ದಾರಿಯರಿತು ಕರ್ತವ್ಯ ನಿಭಾಯಿಸಿ ಉತ್ತಮ ಭವಿಷ್ಯಕ್ಕಾಗಿ ಜನರಿಗಾಗಿ ನಿಸ್ವಾರ್ಥ ಕರ್ಮ ಮಾಡಿರಿ, ವಿವಾಹ ಸಾರ್ಥಕಗೊಳಿಸಿ ಭವಿಷ್ಯಕ್ಕೆ ನಾಂದಿ ಹಾಡಿರಿ, ಶುಭ ಮಂಗಳವಾಗಲಿ, ವಿವಾಹ ಸರ್ವರಿಗೂ ಶುಭ ತರಲಿ, ಸರ್ವೇ ಜನೋ ಸುಖಿನೋಭವಂತು.

# FAMILY BONDING



Jagadeesh Hegde

Recently, my father-in-law was due for the second dose of vaccine. To procure the vaccine, we had to stand in a queue from 5 a.m. and wait for three hours or more. I stood in line to help my father-in-law in the vaccination centre. In the short span of three hours, I could see many old couples struggling to get their vaccination done. When I asked them where their children were, some of them told me that their children had relocated to the U.S., while others told that they simply had not come. I wondered that how children these days cannot accompany their own parents to run some errands, though they stay in the same city?

Before the pandemic, I used to go to Europe on business trips, since I work in an MNC. I used to ask my colleagues working there if they would ask their parents to stay with them in their old age and take care of them. Their answer was a no. In most foreign countries, children are not entitled to look after their old parents, as the government itself has various schemes to take care of the elderly. But in India, there is no such scheme, because most of us take care of our parents with a pure heart and do not abandon them, which is why family bonding is stronger in India than in any other country. However, without being judgmental, I feel that it is not good in the long run for either the country or the society to neglect the elderly. That is when they become most vulnerable and need family support, particularly from their children. A joint family creates a strong bond of unity at an early age. Families play an important role in preserving and promoting the cultural and social values in a society.

So, I urge everyone, to look after their aged parents and be a pillar of support, just as they were when we were kids.

# DID THE PANDEMIC HELP US IN A WAY?

Everyone reading this article are obviously in self-quarantine, thanks to our good old friend from 2019, Covid-19. This virus not only wreaked havoc in our country for the second time, but also our lives. The pandemic has made everyone realise that we must all live in the moment and cherish it. But, we still see so many people being negligent to the fact that Covid-19 still exists and many lives are still at stake. We see many people in our day-to-day lives, sporting the mask on their neck instead of their face (or chin-guard, as I like to call it), not following protocols and in total, being a COVIDIOT.

So, did the pandemic help us in a way? It rather did. Although not in the beginning, but I have started observing a few things in a positive way to cope with the loneliness of self-quarantine and mental health well-being. We can see that the Covid-19 cure rate is increasing day by day. Also on a more wide-view aspect, we can see that pollution has reduced, the air is much cleaner and fresh, people who would not have time to talk to each other are inducing in weekly video-calls or chats with their friends and they also give more 'me-time' to themselves, ensuring emotional well-being. This may seem like this is the world from a teenager's point of view, but maybe this is the need of the hour, watching the world with a positive mindset. So go, watch that favorite movie a million times, breath fresh air, talk to your near and dear ones, do anything, because the best friend we can ever have in our lives is, well, us!

**Ms. Aradhana Hegde**
D/O Jagadeesh Hegde and Babitha Rai N

# ಸುದ್ದಿವಾಹಿನಿಗಳು ಮತ್ತು ಸಾಮಾಜಿಕ ಕಳಕಳಿ



ಪ್ರದೀಪ ಶೆಟ್ಟಿ
ಬೇಳೂರು

ನಮಸ್ತೆ ಮಿತ್ರರೆ, ಬದಲಾದ ಪರಿಸ್ಥಿತಿಯಲ್ಲಿ ಮನುಷ್ಯನ ಅನ್ವೇಷಣೆಯ ಸಹಕಾರದಿಂದ ಆಧುನಿಕ ತಂತ್ರಜ್ಞಾನದ ಮೂಲಕ ಪೂರ್ತಿ ಜಗತ್ತನ್ನು ಒಂದು ಹಳ್ಳಿಯ ಕೊನೆಯ ಸ್ತರದಲ್ಲಿ ಬದುಕುತ್ತಿರುವ ವ್ಯಕ್ತಿಯು ಅರಿಯಲು ಸಾಧ್ಯವಾಗಿದೆ.

ಈ ಸೌಲಭ್ಯದಲ್ಲಿ ದೃಶ್ಯ ಮಾಧ್ಯಮವು ಜಗತ್ತಿನ ಆಗುಹೋಗುಗಳನ್ನು ನೇರವಾಗಿ ಸಮಾಜದ ಸಾಮಾನ್ಯ ಜನರ ಮುಂದೆ ತೆರೆದಿಡುವ ಒಂದು ಪ್ರಮುಖವಾದ ಅಂಗ. ಮಾಧ್ಯಮಗಳು ಸಮಾಜದಲ್ಲಿ ನಡೆಯುವ ಸರಿ–ತಪ್ಪು, ಸತ್ಯ–ಮಿತ್ಯಗಳನ್ನು ಪಾರದರ್ಶಕವಾಗಿ ಜನರ ಮುಂದಿಟ್ಟು ಸರಿಯಾದದ್ದನ್ನು ಪ್ರಶಂಸಿಸಿ, ತಪ್ಪಾಗಿದ್ದಲ್ಲಿ ಕಿವಿ ಹಿಂಡಿ, ಸರಿಯಾದ ದಾರಿಗೆ ಮರಳಿಸುವ ಕಾರ್ಯದಲ್ಲಿ ಮಹತ್ತರ ಪಾತ್ರವಹಿಸುವುದು ಹಾಗೂ ಜನರ ಮತ್ತು ಆಳುವ ಸರ್ಕಾರಗಳ ನಡುವೆ ಕೊಂಡಿಯಾಗಿರುವ ಒಂದು ಜವಾಬ್ದಾರಿಯುತ ಸ್ಥಾನದಲ್ಲಿ ಇರುವ ವ್ಯವಸ್ಥೆ.

ಪ್ರಸ್ತುತ ಸಂದರ್ಭದಲ್ಲಿ ನಮ್ಮ ಮಾಧ್ಯಮಗಳು ಈ ಕೆಲಸವನ್ನು ಎಷ್ಟು ಪ್ರಾಮಾಣಿಕತೆಯಿಂದ ಮಾಡುತ್ತಿವೆ ಎನ್ನುವ ಚಿಂತೆ ಸಾಮಾನ್ಯರಾದ ನಮ್ಮಲ್ಲಿ ಕಾಡುತ್ತಿದೆ. ಏಕೆಂದರೆ ಇಂದಿನ ಮಾಧ್ಯಮ ಸಂಸ್ಥೆಗಳಿಗೆ ಸಮಾಜದ ಸ್ವಾಸ್ಥ್ಯ ಕಾಪಾಡುವುದರಲ್ಲಿ ಇರುವ ಆಸಕ್ತಿಗಿಂತ ಟಿ ಆರ್ ಪಿ ಗಳಿಸಿಕೊಳ್ಳುವುದರಲ್ಲಿ ಇರುವ ಹಪಾಹಪಿ ಎದ್ದು ಕಾಣುತ್ತದೆ. ಟಿ ಆರ್ ಪಿ ಎಂದರೆ ಒಂದು ನಿರ್ದಿಷ್ಠ ಅವಧಿಯಲ್ಲಿ ಬೇರೆ ಬೇರೆ ಮಾಧ್ಯಮಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮದಲ್ಲಿ ಹೆಚ್ಚು ವೀಕ್ಷಕರು ಯಾವ ಮಾಧ್ಯಮದ ಕಾರ್ಯಕ್ರಮ ವೀಕ್ಷಿಸುತ್ತಾರೆ ಎನ್ನುವುದರ ಮೂಲಕ ನಿರ್ಧಾರ ಆಗುತ್ತದೆ. ಹಾಗೆಯೇ ಟಿ ಆರ್ ಪಿ ಜಾಸ್ತಿಯಾದಷ್ಟು ಉತ್ಪಾದನ ವಲಯದ ಸಂಸ್ಥೆಗಳು, ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸಹಕಾರಿಯಾಗುವ ಜಾಹಿರಾತುಗಳಿಗಾಗಿ ನೀಡಲು ಈ ಮಾಧ್ಯಮಗಳಿಗೆ ಅತಿ ಹೆಚ್ಚು ಹಣ ನೀಡಲು ಮುಂದೆ ಬರುತ್ತವೆ. ಹಾಗಾಗಿ ಮಾಧ್ಯಮಗಳು ಈ ವ್ಯವಹಾರದ ಗುರಿಯನ್ನು ಗಮನದಲ್ಲಿ ಇಟ್ಟುಕೊಂಡು ಸಾಗುತ್ತಿರುವ ಭರದಲ್ಲಿ ಮೂಲ ಉದ್ದೇಶವನ್ನು ಮರೆಯುತ್ತಿವೆ ಎಂಬ ಭಾವನೆ ವೀಕ್ಷಕರಿಗೆ ಮೂಡುತ್ತಿದೆ.

ಅಲ್ಲೊಂದು ಇಲ್ಲೊಂದು ಸಮಾಜಕ್ಕೆ ಒಳಿತುಮಾಡುವ ಕಾರ್ಯ ಮತ್ತು ಸುದ್ದಿಗಳನ್ನು ಬಿಟ್ಟರೆ ಬಹುತೇಕ ಮಾಧ್ಯಮಗಳು ದಿನದ 24 ಗಂಟೆಯೂ ಒಮ್ಮೆ ಬಿತ್ತರಿಸಿದ ಸುದ್ದಿಗಳನ್ನೇ ಪುನಃ ಪುನಃ ತೋರಿಸಿ ಜನರ ನೆಮ್ಮದಿಯನ್ನು ಕಸಿದುಕೊಳ್ಳುತ್ತಿವೆ. ನಮ್ಮ ಮಾಧ್ಯಮವೇ ಮೊದಲು ಸುದ್ದಿ ನೀಡಬೇಕು ಎಂಬ ಭರದಲ್ಲಿ ಸತ್ಯಾಸತ್ಯತೆಗಳನ್ನು ಪರಾಮರ್ಶೆ ಮಾಡದೆ ಬಿತ್ತರವಾಗುತ್ತಿರುವ ಸುದ್ದಿಗಳನ್ನು ಜನರು ಇಂದು ನೋಡುವ ಪರಿಸ್ಥಿತಿ ಬಂದಿದೆ. ಯಾವ ವಿಷಯವನ್ನು ಸಮಾಜದ ಮುಂದೆ ಇಡಬೇಕು ಯಾವುದು ಇಡಬಾರದು ಎನ್ನುವ ಕನಿಷ್ಠ ಚಿಂತನೆಯನ್ನು ನಡೆಸದೆ ಸುದ್ದಿ ಬಿತ್ತರಿಸುವ ಮಾಧ್ಯಮಗಳಿಗೆ ಜನರು ಹಾಕುತ್ತಿರುವ ಛೀಮಾರಿಯನ್ನು ನೋಡಿಯೂ ನೋಡದವರಂತೆ ವರ್ತಿಸುತ್ತಿದ್ದಾರೆ.

ಸಾಮಾನ್ಯ ಜನರ ಸಮಸ್ಯೆಗಳ ಕುರಿತ ಸುದ್ದಿಗಳು ಹಾಗೆ ಬಂದು ಹೀಗೆ ಹೋದರೆ, ಖ್ಯಾತ ನಾಮರ ವೈಯಕ್ತಿಕ ವಿಷಯಗಳು ದಿನವಿಡೀ ಈ ಮಾಧ್ಯಮಗಳಲ್ಲಿ ರಾರಾಜಿಸುತ್ತಿವೆ. ಇಂತಹ ಸುದ್ದಿಗಳಿಂದ ಸಮಾಜದ ಯಾವ ಸ್ಥರದ ಜನರಿಗೆ ಉಪಯೋಗ ಆಗುತ್ತಿದೆ ಎಂಬ ಪ್ರಶ್ನೆ ಎಲ್ಲರಲ್ಲೂ ಇದೆ. ಸಮಾಜದಲ್ಲಿ ದಿನ ಬೆಳಗಾದರೆ ಸಾವು ನೋವು ವಂಚನೆಗಳು ನಡೆಯುತ್ತಿವೆ. ಮಾಡಲು ಕೆಲಸವಿಲ್ಲ ಕೈಯಲ್ಲಿ ಹಣವೂ ಇಲ್ಲ ಹೀಗೆ ಜನರ ಜೀವನ ಬದುಕುವುದಕ್ಕೂ ಕಷ್ಟವಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಯಾವುದೋ ವ್ಯಕ್ತಿ ಸಮಾಜದಲ್ಲಿ ಜನಪ್ರಿಯತೆ ಹೊಂದಿರುವವರು ಎನ್ನುವ ಕಾರಣಕ್ಕೆ ಅವರ ವೈಯಕ್ತಿಕ ಸಮಸ್ಯೆಗಳನ್ನು ಇಡೀ ರಾಜ್ಯದ ಮತ್ತು ಸಮಾಜದ ಸಮಸ್ಯೆ ಎಂಬ ರೀತಿಯಲ್ಲಿ ಈ ಮಾಧ್ಯಮಗಳು ಸುದ್ದಿ ಬಿತ್ತರಿಸುವುದನ್ನು ನೋಡಿದರೆ ನಿಜವಾದ ಪತ್ರಿಕೋದ್ಯಮದ ಬಗ್ಗೆ ಸಂಶಯ ಬರುವುದು. ಈ ಸುದ್ದಿಗಳು ನೀಡುವ ಸಂದೇಶವಾದರು ಏನು? ಒಂದು ವಿಚಾರದ ಬಗ್ಗೆ ಹತ್ತಾರು ಜನರ ಬಳಿ ಪ್ರತಿಕ್ರಿಯೆ ಕೇಳಿ

ಅಭಿಪ್ರಾಯ ತಿಳಿಸಿದವರ ನಡುವೆ ವೈಮನಸ್ಸು ತಂದಿಟ್ಟು ತಮಾಷೆ ನೋಡುವ ಕೆಲಸವನ್ನು ಮಾಧ್ಯಮಗಳು ಮಾಡುತ್ತಿವೆ ಎಂಬ ಮಾತು ಕೇಳಿ ಬರುತ್ತಿದೆ.

ಹೀಗೇ ಮುಂದುವರಿದರೆ ಜನ ಸಾಮಾನ್ಯರ ತಾಳ್ಮೆಯ ಕಟ್ಟೆಯೊಡೆದು ಮುಂದೊಂದು ದಿನ ಮಾಧ್ಯಮಗಳ ವಿರುದ್ಧವಾಗಿ ಪ್ರತಿಭಟಿಸುವ ದಿನಗಳು ಬಂದರೂ ಬರಬಹುದು. ಇನ್ನು ಮುಂದಾದರೂ ಮಾಧ್ಯಮಗಳು ಸುದ್ದಿ ಬಿತ್ತರಿಸುವ ಮುನ್ನ ತುಸು ಯೋಚಿಸಲಿ ಎಂಬುದು ಈ ಲೇಖನದ ಆಶಯ.

## ಬಂಟರ ಸಂಘ ಬೆಂಗಳೂರು – ಪ್ರಾರ್ಥನಾ ಮಂದಿರ ಸಮಿತಿ

ಬಂಟರ ಸಂಘ ಬೆಂಗಳೂರು ಪ್ರಾರ್ಥನಾ ಮಂದಿರ ಸಮಿತಿ ಮತ್ತು ಬೆಂಗಳೂರು ಕರಾವಳಿ ಒಕ್ಕೂಟ ಇವರ ಆಶ್ರಯದಲ್ಲಿ ದಿನಾಂಕ 17.07.2021ರಂದು ಸಂಜೆ 7.00ರಿಂದ 10.00ರವರೆಗೆ ತುಳುವ ಜಾಲ್ದ್ ಕೃಷ್ಣನ ತೆಲಿಕೆ ನಲಿಕೆ ತುಳುವಿನಲ್ಲಿ ಭಗವದ್ಗೀತೆ ಪ್ರವಚನವನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗಿತ್ತು.

ಪಲಿಮಾರು ಮಠದ ಶ್ರೀ ಶ್ರೀ ವಿದ್ಯಾಧೀಶ ಶ್ರೀಪಾದರು ಆಶೀರ್ವಚನ ನೀಡಿದರು. ಶ್ರೀ ಸರ್ವೋತ್ತಮ ಶೆಟ್ಟಿ, ಅಬುದಾಬಿ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದು, ಕಾರ್ಯಕ್ರಮವನ್ನು ಶ್ರೀ ಶ್ರೀ ಪ್ರಸಾದೇಶ್ವರ ಕೃಷ್ಣ ದಾಸೆರ್ ನಡೆಸಿಕೊಟ್ಟರು. ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದು, ಸ್ವಾಗತ ಭಾಷಣವನ್ನು ಗೌರವ ಕಾರ್ಯದರ್ಶಿಯವರಾದ ಶ್ರೀ ಮಧುಕರ ಎಂ. ಶೆಟ್ಟಿಯವರು, ಧನ್ಯವಾದ ಸಂಘದ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್‌ರಾದ ಶ್ರೀ ರಾಜೇಶ್ ಶೆಟ್ಟಿ, ಕುತ್ಯಾರು ಸಮರ್ಪಣೆಗೈದರು.

**ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

## ಅಭಿನಂದನೆಗಳು



ವಿಜಯಾ ಬ್ಯಾಂಕಿನ ನಿವೃತ್ತ ಸೀನಿಯರ್ ಮ್ಯಾನೇಜರ್ ಬೆಂಗಳೂರು ಬಂಟರ ಸಂಘದ ಹಿರಿಯ ಸದಸ್ಯರಾದ ಶ್ರೀ ಹಿಲಿಯಾಣ ವಿಶ್ವನಾಥ ಹೆಗ್ಡೆಯವರು ಉಡುಪಿ ಹಿರಿಯ ನಾಗರಿಕರ ಸಂಸ್ಥೆಯ 2021–23ನೇ ಸಾಲಿನ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಇವರಿಗೆ ಬಂಟರ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

## *Congratulations*



Dr. Kishora Shetty who is working in Boeing Aerospace Company has completed his Ph.D in Engineering from Academy of Scientific and Innovative Research, Ghaziabad in association with National Aerospace Laboratories, Bangalore.This is his second Doctorate degree. He has done his B.E from NITK Surathkal with First Rank in 1998 and Masters from IIsc, Bangalore with First Rank in 2007. He is son of Late. Shri. Chandrashekhar Shetty, retired Head Master and Smt. Parvathi C. Shetty, Molahalli Koikadi Noojinamame, Kundapura Taluk. Bunts' Sangha, Bangalore congratulates and wishes him all the best.

# Unsung Heroes of Indian Revolt 1857

## *The Brave Sons of Nargunda*



A.Girish Rai

**India's struggle for Independence was a long crushing battle. Efforts towards the patriotic goal of PurnaSwaraj began way back in the late 17th century. There were a number of unsung heroes who fought as much as the freedom fighters of India. However, they never received the recognition and limelight. Karnataka was one of the many states that remained in the forefront of Sepoy Mutiny and the Freedom Movement. Venkatappa Nayaka of Surapura, Mundaragi Bhima Rao, Babasaheb of Nargunda and Kittur Rani Chenamma were some of the prominent leaders in the movements. In the background of these uprisings in various parts of the country, the crown replaced the Company Rule in 1858. This was done primarily as an effort to establish strong center as a precondition for progress and harmony.**

### Clarion Call of Freedom to Indians

Dadaji Rao Bhave, a Marathi speaking Brahmin shifted from the Konkan area to Nargunda, a small town near Hubli, Dharwad District in the year 1658 and settled down there with his family. He had worked earlier as an Assistant to Ramachandra Javadekar, Minister of Shivaji Mahahraj. Ramachandra Javadekar had appointed one of his followers, Appaji Suro as the chief of Nargunda Fort. Dadaji Bhave by his discipline and bravery gained the confidence of Appaji Suro. After the demise of Appaji Suro, Dadaji Bhave became the chief of Nargunda fort. Bhave by his ability and tact annexed many villages in and around Nargunda. The Peshwa of Poona and Chatrapati of Kolhapur recognized Bhave's rights after the death of Appaji Suro. Dadaji Bhave was followed by Balawant Rao Bhave, Dadaji Rao Bhave 2, Bhaskar Rao Bhave 1, Venkat Rao Bhave, Dadaji Bhave 3 and finally Bhaskar Rao Bhave 2 came to power between 1842 and 1858. He was popularly known as Baba Sahib Bhave and recognized as a strong leader of this clan. Nargunda Fort was built by Maratha King Chatrapati Shivaji in 1675. This impregnable fort is situated on a hill providing all round view of nearby areas and designed to be challenging for any enemy to capture it. It is said that the design of the fort was prepared by the King Shivaji himself. The suzerainty of the fort was with the Marathas till 1778.

### Sepoy Mutiny

The East India Company came to India during 1600 for trade and by 1850, it almost controlled major parts of India. The company employed locals as sepoys to maintain order and defend their trading centers. After many years, discontent and strong suspicion began to spread that the British were engaged in converting Indians through missionaries. Indian soldiers felt deeply offended by the fraudulent way the company annexed state after state. The Doctrine of Lapse allowed the company to annex a territory by questionable means. These were some of the causes of Sepoy Mutiny, also known as the Indian Revolt of 1857. This uprising was quelled by harsh methods.


Though the uprising was controlled, the methods employed by British offended many in the Western World. An American magazine “Ballou’s Pictorial” published a full page illustration showing the preparations for such an execution in its issue of Oct 3rd, 1857; a mutineer was depicted chained to the front of a British canon awaiting his imminent execution as others were watching the ghastly spectacle in disbelief.

**Nargunda Fort**




